ಪ್ರವಾದಿ ಚರಿತ್ರೆ

(ಭಾಗ – 2)

ಮುಹಮ್ಮದ್ ಅಬ್ದುಲ್ ಜಲಾಲ್

ಪರಮ ದಯಾಮಯನೂ ಕೃಪಾಶೀಲನೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಇದು ಪ್ರಾಥಮಿಕ ಮದ್ರಸದ ಮೂರು ಮತ್ತು ನಾಲ್ಕನೆಯ ತರಗತಿಗಳಲ್ಲಿ ಕಲಿಸಲಿಕ್ಕಾಗಿ ಸಿದ್ಧಪಡಿಸಿದ ಪ್ರವಾದಿ ಚರಿತ್ರೆಯ ದ್ವಿತೀಯ ಭಾಗವಾಗಿದೆ. ಪ್ರವಾದಿವರ್ಯ(ಸ)ರ ಹಿಜ್ರತ್‌ನಿಂದ ನಿಧನದ ವರೆಗಿನ ಚರಿತ್ರೆಯ ಪ್ರಮುಖ ಅಂಶಗಳನ್ನು ಈ ಕೃತಿಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಚಿಕ್ಕ ಮಕ್ಕಳಿಗಾಗಿ ಬರೆದಿರುವುದರಿಂದ ಘಟನೆಗಳ ವಿವರಣೆಯನ್ನು ಆದಷ್ಟು ಕಡಿಮೆಗೊಳಿಸಿ ವರ್ಣನೆಯನ್ನು ಕೈ ಬಿಡಲಾಗಿದೆ. ಪ್ರವಾದಿವರ್ಯರ(ಸ) ಮಾದರಿ ಗುಣನಡತೆ ಮತ್ತು ಧರ್ಮಪ್ರಚಾರ ರಂಗದಲ್ಲಿ ಅವರು ಅನುಭವಿಸಿದ ಕಠಿಣ ಪರಿಸ್ಥಿತಿಗಳ ಸ್ಪಷ್ಟ ಚಿತ್ರಣ ಮಕ್ಕಳ ಮನದಲ್ಲಿ ಮೂಡಲು ಇದು ಸಹಾಯಕವಾದೀತು.

ಪಾಠಗಳ ಕೊನೆಯಲ್ಲಿ ಕಲಿಯಲಿಕ್ಕಾಗಿ ಪ್ರಸ್ತುತ ಅಧ್ಯಾಯಗಳ ಬಗೆಗಿನ ಕೆಲವು ಪ್ರಶ್ನೆಗಳನ್ನು ಸೇರಿಸಲಾಗಿದೆ. ಇಂತಹ ಇತರ ಪ್ರಶ್ನೆಗಳನ್ನು ಅಧ್ಯಾಪಕರು ಸ್ವತಃ ರಚಿಸಿ ವಿದ್ಯಾರ್ಥಿಗಳು ಕಲಿಯುವಂತೆ ಪ್ರೇರೇಪಿಸಬೇಕು.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

1. ಮದೀನಾದಲ್ಲಿ

ಪ್ರವಾದಿವರ್ಯ(ಸ)ರು ಮದೀನಾಕ್ಕೆ ಬಂದ ಬಳಿಕ ಅಬೂ ಅಯ್ಯೂಬ್ ಅನ್ಸಾರಿ ಯವರ ಮನೆಯಲ್ಲಿ ಸ್ವಲ್ಪ ಕಾಲ ಉಳಕೊಂಡರು. ಅದೇ ವೇಳೆ ಮಸ್ಜಿದುನ್ನಬವಿ (ಪ್ರವಾದಿಯ ಮಸೀದಿ) ಎಂಬ ಮಸೀದಿಯನ್ನು ನಿರ್ಮಿಸಿದರು. ಮಸೀದಿಯ ಸಮೀಪ ಪ್ರವಾದಿವರ್ಯ(ಸ)ರಿಗೆ ಪ್ರತ್ಯೇಕ ವಸತಿಯನ್ನು ಏರ್ಪಡಿಸಿದರು. ಪ್ರವಾದಿ ವರ್ಯ(ಸ)ರು ಅಲ್ಲಿ ವಾಸ ಹೂಡಿದರು.

ಮಸ್ಜಿದುನ್ನಬವಿಯನ್ನು ಆರಂಭದಲ್ಲಿ ಸೋಗೆಯಿಂದ ನಿರ್ಮಿಸಲಾಗಿತ್ತು. ಇಂದು ಅದು ಭವ್ಯ ಕಟ್ಟಡವಾಗಿದೆ. ಜಗತ್ತಿನಲ್ಲಿ ಅತ್ಯಧಿಕ ಪುಣ್ಯದಾಯಕವಾದ ಮೂರು ಮಸೀದಿಗಳಿವೆ. 1. ಮಸ್ಜಿದುಲ್ ಹರಾಮ್ (ಮಕ್ಕಾ), 2. ಮಸ್ಜಿದುಲ್ ಅಕ್ಸಾ (ಜೆರೂಸಲೇಮ್) ಮತ್ತು 3. ಮಸ್ಜಿದುನ್ನಬವಿ (ಮದೀನ).

ಮಕ್ಕಾದಿಂದ ನಿರಾಶ್ರಿತರಾಗಿ ಬಂದ 'ಮುಹಾಜಿರ್'ಗಳಿಗೆ ಅನ್ಸಾರಿಗಳು ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿದ್ದರು. ಪ್ರವಾದಿಯವರ್ಯ(ಸ)ರು ಉಪದೇಶದಿಂದ ಅವರು ಪರಸ್ಪರ ಸಹೋದರರಂತೆ ಬಾಳಿದರು. ಪ್ರವಾದಿವರ್ಯ(ಸ)ರು ಪ್ರತಿಯೋರ್ವ ಮುಹಾಜಿರ್‌ನಿಗೆ ಓರ್ವ ಅನ್ಸಾರ್‌ನನ್ನು 'ಸಹೋದರ'ನಾಗಿ ನಿಶ್ಚಯಿಸಿ ಕೊಟ್ಟರು. ಈ ನಿರ್ಣಯದ ಪ್ರಕಾರ ಆರಂಭ ಹಂತದಲ್ಲಿ ಈ 'ಸಹೋದರರು' ಪರಸ್ಪರ ವಾರೀಸು ದಾರರೂ ಆಗಿದ್ದರು. ಅನಂತರ ಆ ನಿಯಮವನ್ನು ರದ್ದು ಪಡಿಸಲಾಯಿತು.

ಮದೀನಾದಲ್ಲಿ ಮುಸ್ಲಿಮರಿಗೆ ಇಸ್ಲಾಮ್ ಧರ್ಮದ ನೀತಿ ನಿಯಮಗಳನ್ನು ಕಾರ್ಯಗತಗೊಳಿಸುವ ಸ್ವಾತಂತ್ರ್ಯ ಲಭಿಸಿತು. ಪ್ರವಾದಿವರ್ಯರಿಗೆ(ಸ) ಅಲ್ಲಿನ ಸಂಪೂರ್ಣ ಅಧಿಕಾರ ದೊರೆಯಿತು. ಅರ್ಥಾತ್ ಮದೀನಾದಲ್ಲಿ ಒಂದು ಪುಟ್ಟ ಇಸ್ಲಾಮೀ ರಾಷ್ಟ್ರ ಸ್ಥಾಪನೆಯಾಯಿತು. ಆ ಬಳಿಕ ಅಲ್ಲಾಹನ ವತಿಯಿಂದ ಸಾಮಾಜಿಕ ಜೀವನದ ಇಸ್ಲಾಮೀ ನಿಯಮಗಳು ಅವತೀರ್ಣವಾಗಲಾರಂಭಿಸಿದುವು. ಹೀಗೆ ಹತ್ತು ವರ್ಷಗಳ ಅವಧಿಯಲ್ಲಿ ಇಸ್ಲಾಮೀ ನಿಯಮ ಮತ್ತು ವಿಧಿಗಳನ್ನು ಪ್ರವಾದಿ(ಸ) ಮತ್ತು ಅನುಯಾಯಿಗಳು ಯಥಾವತ್ತಾಗಿ ಕಾರ್ಯಗತಗೊಳಿಸಿದರು. ತನ್ಮೂಲಕ

ಧರ್ಮದ ವೈಯಕ್ತಿಕ, ಕೌಟುಂಬಿಕ, ಆರ್ಥಿಕ, ಆಡಳಿತಾತ್ಮಕ ಇತ್ಯಾದಿ ಎಲ್ಲ ನಿಯಮಗಳೂ ಜಾರಿಗೊಂಡುವು. ಪವಿತ್ರ ಕುರ್‌ಆನಿನ 21 ಅಧ್ಯಾಯಗಳು ಮದೀನಾದಲ್ಲಿ ಅವತೀರ್ಣಗೊಂಡಿವೆ. ಅವುಗಳಲ್ಲಿ ಹೆಚ್ಚಿನ ಅಧ್ಯಾಯಗಳು ಬಹಳ ದೀರ್ಘವಾಗಿವೆ.

ನಮಾಝ್, ಮಕ್ಕಾ ಜೀವನದಲ್ಲಿಯೇ ಕಡ್ಡಾಯವಾಗಿದ್ದರೂ ಅದರ ಬಹಿರಂಗ ನಿರ್ವಹಣೆಗೆ ವೈರಿಗಳು ಅಡ್ಡಿಯಾಗಿದ್ದರು. ಮದೀನಾಕ್ಕೆ ಬಂದ ಕೂಡಲೇ ಸಾಮೂಹಿಕ ನಮಾಝ್, ಜುಮ್‌ಅ ಖುತ್ಬಾ, ಅದಾನ್ ಕರೆ ಇತ್ಯಾದಿಗಳನ್ನು ಸುವ್ಯವಸ್ಥಿತಗೊಳಿಸ ಲಾಯಿತು. ಹಿಜರಿ ಎರಡನೆಯ ವರ್ಷದಲ್ಲಿ ಝಕಾತ್ ಮತ್ತು ರಮಝಾನಿನ ಉಪವಾಸ ವ್ರತವನ್ನು ಕಡ್ಡಾಯಗೊಳಿಸಲಾಯಿತು.

ಮದೀನಾದ ಕೆಲವರಿಗೆ ಇಸ್ಲಾಮಿನಲ್ಲಿ ವಿಶ್ವಾಸವಿರಲಿಲ್ಲ. ಆದರೆ, ತೋರಿಕೆಗೆ ನಾವು ಮುಸ್ಲಿಮರೆಂದು ಹೇಳಿಕೊಳ್ಳುತ್ತಿದ್ದರು. ಅವರನ್ನು 'ಮುನಾಫಿಕ್' (ಕಪಟ ವಿಶ್ವಾಸಿ) ಎನ್ನಲಾಗುತ್ತದೆ. ಆ ಮಂದಿಯನ್ನು ಪ್ರವಾದಿವರ್ಯ(ಸ)ರು ನಂಬುತ್ತಿರಲಿಲ್ಲ. ಅವರ ಬಗ್ಗೆ ಬಹಳ ಎಚ್ಚರಿಕೆ ವಹಿಸುತ್ತಿದ್ದರು. ಆ ಜನರು ಇಸ್ಲಾಮಿನ ನಾಶವನ್ನು ಬಯಸುತ್ತಿದ್ದರು.

ಮದೀನಾದ ಪರಿಸರ ಪ್ರದೇಶಗಳಲ್ಲಿ ಯಹೂದಿಯರು ಬಂದು ನೆಲೆಸಿದ್ದರು. ಅವರಿಗೆ ತಮ್ಮ ಬಳಿಯಿದ್ದ ವೇದಗ್ರಂಥದ ಮೂಲಕ ಮುಹಮ್ಮದ್(ಸ)ರನ್ನು ಅಲ್ಲಾಹನ ಪ್ರವಾದಿಯೆಂದು ಗುರುತಿಸಲು ಸಾಧ್ಯವಿತ್ತು. ಆದರೆ ಆ ಜನರು ಬಹಳ ದುಷ್ಟರಾಗಿದ್ದರು. ಅಂತ್ಯ ಪ್ರವಾದಿಯವರು ಅನ್ಯ ಜನಾಂಗದವರಾಗಿರುವುದು ಅವರಿಗೆ ಹಿಡಿಸಲಿಲ್ಲ. ಅವರ ಹೃದಯದಲ್ಲಿ ಪ್ರವಾದಿವರ್ಯರ(ಸ) ಬಗ್ಗೆ ಅಸೂಯೆ ಹೆಚ್ಚಿತು.

ಅವರು ಇಸ್ಲಾಮ್ ಧರ್ಮದ ವೈರಿಗಳಾದರು. ಪ್ರವಾದಿವರ್ಯರು(ಸ) ಅನುನಯದಿಂದ ಅವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರು. ಯಹೂದಿ ಗೋತ್ರಗಳ ಜತೆ ಒಪ್ಪಂದಕ್ಕಾಗಿ ಮಾತುಕತೆ ನಡೆಸಿದರು. ಯಾರಾದರೂ ಮದೀನಾವನ್ನು ಆಕ್ರಮಿಸಿದರೆ, ಅವರನ್ನು ಯಹೂದಿಯರು ಮತ್ತು ಮದೀನಾದ ಮುಸ್ಲಿಮರು ಜತೆಗೂಡಿ ಎದುರಿಸಬೇಕೆಂದು ಒಪ್ಪಂದದಲ್ಲಿ ಎತ್ತಿ ಹೇಳಲಾಗಿತ್ತು. ಮುಸ್ಲಿಮರ ವಿರುದ್ಧ ಯಾರಿಗೂ ಬೆಂಬಲ ನೀಡುವು ದಿಲ್ಲವೆಂದು ಅನೇಕ ಗೋತ್ರಗಳು ಭರವಸೆ ನೀಡಿದುವು.

ಮಕ್ಕಾದ ಕುರೈಶರು ಯಾವ ವೇಳೆಯಲ್ಲಿಯೂ ಮದೀನಾವನ್ನು ಆಕ್ರಮಿಸಬಹುದು ಎಂದು ಪ್ರವಾದಿ(ಸ) ಅರಿತಿದ್ದರು. ಆದ್ದರಿಂದ ಇಂತಹ ಮಾರ್ಗೋಪಾಯಗಳಿಂದ

ವೈರಿಗಳ ಉಪಟಳವನ್ನು ನಿವಾರಿಸಲು ಪ್ರವಾದಿವರ್ಯರು(ಸ) ಪ್ರಯತ್ನಿಸುತ್ತಲಿದ್ದರು. ಆದರೆ, ಸ್ವಲ್ಪ ಸಮಯದಲ್ಲಿಯೇ ಕುರೈಶಿ ಸೇನೆಯು ಮದೀನಾವನ್ನು ಆಕ್ರಮಿಸಿ ಅದನ್ನು ನಾಶ ಪಡಿಸಲು ಸಜ್ಜಾಯಿತು. ಆ ವೇಳೆ ಯಹೂದಿಯರು ಒಪ್ಪಂದ ಉಲ್ಲಂಘಿಸಿದರು. ಇಂತಹ ಅನೇಕ ಕಾರಣಗಳಿಂದಾಗಿ ಪ್ರವಾದಿ(ಸ) ಮತ್ತು ಅನುಯಾಯಿಗಳು ಹಲವು ಯುದ್ಧಗಳನ್ನು ಎದುರಿಸಬೇಕಾಯಿತು.

ಪ್ರಶ್ನೆಗಳು:

1. ಜಗತ್ತಿನಲ್ಲಿ ಅತ್ಯಧಿಕ ಪುಣ್ಯವಿರುವ ಮಸೀದಿಗಳು ಎಷ್ಟು? ಯಾವುವು?
2. ಹಿಜ್ರತ್‌ನ ಬಳಿಕ ಮದೀನಾದಲ್ಲಿ ಯಾರಿಗೆ ಅಧಿಕಾರವಿತ್ತು?
3. ಝಕಾತ್ ಮತ್ತು ಉಪವಾಸ ಯಾವ ವರ್ಷದಲ್ಲಿ ಕಡ್ಡಾಯವಾಯಿತು?
4. ಮದೀನಾದ ಪರಿಸರಗಳಲ್ಲಿ ಯಾವ್ಯಾವ ವರ್ಗದವರಿದ್ದರು? ಅವರನ್ನು ಒಲಿಸಲಿಕ್ಕಾಗಿ ಪ್ರವಾದಿ(ಸ) ಏನು ಮಾಡಿದರು?

2. ಕಿಬ್ಲಾದ ಬದಲಾವಣೆ

ನಾವು ಮಕ್ಕಾದ ಕಅಬಾ ಭವನಕ್ಕೆ ಮುಖ ಮಾಡಿ ನಮಾಝ್ ಮಾಡುತ್ತೇವೆ. ಜಗತ್ತಿನ ಮುಸ್ಲಿಮರೆಲ್ಲರೂ ಅದೇ ದಿಕ್ಕಿಗೆ ತಿರುಗಿ ನಮಾಝ್ ಮಾಡುತ್ತಾರೆ. ಅದುವೇ ನಮ್ಮ ಕಿಬ್ಲಾ (ಅಭಿಮುಖ ಕೇಂದ್ರ) ಆಗಿದೆ.

'ಕಅಬಾ' ಅಲ್ಲಾಹನ ಆರಾಧನೆಗಾಗಿ ಜಗತ್ತಿನಲ್ಲಿ ನಿರ್ಮಾಣಗೊಂಡ ಪ್ರಥಮ ಭವನವಾಗಿದೆ. ಪ್ರವಾದಿ ಇಬ್ರಾಹೀಮ್(ಅ) ಮತ್ತು ಅವರ ಪುತ್ರ ಪ್ರವಾದಿ ಇಸ್ಮಾಈಲ್(ಅ) ಅವರು ಅದನ್ನು ನಿರ್ಮಿಸಿದ್ದರು.

ಅರಬರು ಪ್ರಾಚೀನ ಕಾಲದಲ್ಲಿಯೇ ಕಅಬಾವನ್ನು ಗೌರವಿಸುತ್ತಿದ್ದರು ಮತ್ತು ಕಅಬಾದ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದರು. ದೂರದೂರದ ಪ್ರದೇಶಗಳಿಂದಲೂ ಜನರು ಕಅಬಾಕ್ಕೆ ಬರುತ್ತಿದ್ದರು. ಕುರೈಶರು ಕಅಬಾದ ಪರಿಪಾಲಕರಾಗಿದ್ದರು.

ಆರಂಭದಲ್ಲಿ ಮುಸ್ಲಿಮರು ಫೆಲಸ್ತೀನ್‌ನಲ್ಲಿರುವ ಬೈತುಲ್ ಮುಕದ್ದಸ್‌ಗೆ ಮುಖ ಮಾಡಿ ನಮಾಝ್ ನಿರ್ವಹಿಸುತ್ತಿದ್ದರು. ಯಹೂದಿಯರೂ ಕ್ರೈಸ್ತರೂ ಅದರತ್ತ ಮುಖ ಮಾಡಿ ಪ್ರಾರ್ಥಿಸುತ್ತಿದ್ದರು. ಅದು ಮುಸ್ಲಿಮರಿಗೂ ಪ್ರಧಾನ ಪುಣ್ಯ ಸ್ಥಳವಾಗಿದೆ. ಅಲ್ಲಿ ಅನೇಕ ಪ್ರವಾದಿಗಳು ಪ್ರಾರ್ಥಿಸಿದ್ದರು.

ಕಅಬಾವನ್ನು ಬಿಟ್ಟು ಬೈತುಲ್ ಮುಕದ್ದಸ್‌ನತ್ತ ಮುಖ ಮಾಡಿ ನಮಾಝ್ ಮಾಡು ವುದು ಪ್ರವಾದಿವರ್ಯರಿಗೆ(ಸ) ಅಸಮಾಧಾನವಿತ್ತು. ಆದರೆ, ಅಲ್ಲಾಹನ ಅಪ್ಪಣೆಯಿಲ್ಲದೆ ಸ್ವಇಚ್ಛೆಯಿಂದ ಪ್ರವಾದಿವರ್ಯರು(ಸ) ಏನನ್ನೂ ಮಾಡಕೂಡದು.

ಆದ್ದರಿಂದ ಕಿಬ್ಲಾ ವನ್ನು ಕಅಬಾಕ್ಕೆ ಬದಲಾಯಿಸುವ ಅಲ್ಲಾಹನ ಆಜ್ಞೆಗಾಗಿ ಕಾಯುತ್ತಿದ್ದರು. ಪ್ರವಾದಿವರ್ಯರು(ಸ) ಮದೀನಾಕ್ಕೆ ಆಗಮಿಸಿದ 17 ತಿಂಗಳುಗಳ ಬಳಿಕ ಆ ಆಜ್ಞೆ ದೊರೆಯಿತು.

ಮುಸ್ಲಿಮರು ಕಅಬಾದತ್ತ ಮುಖ ಮಾಡಿ ನಮಾಝ್ ಮಾಡಲಾರಂಭಿಸಿದಾಗ ಯಹೂದಿಗಳು ನಾನಾ ರೀತಿಯಿಂದ ಟೀಕಿಸಿದರು. ಮುಹಮ್ಮದ್(ಸ)ರು ನಿಜವಾಗಿಯೂ

ಓರ್ವ ಪ್ರವಾದಿಯಾಗಿರುತ್ತಿದ್ದರೆ, ಕಿಬ್ಲಾವನ್ನು ಹೀಗೆ ಬದಲಾಯಿಸುವ ಅಗತ್ಯವೇನು ಎಂದು ಪ್ರಶ್ನಿಸುತ್ತಿದ್ದರು. ಆದರೆ, ಅಲ್ಲಾಹನಲ್ಲಿ ವಿಶ್ವಾಸವಿರಿಸಿ ಆತನ ಆದೇಶ ಪಾಲಿಸಿ ಜೀವಿಸುವುದೇ ಪ್ರಧಾನವಾಗಿದೆ. ಯಾವ ದಿಕ್ಕಿಗೆ ಮುಖ ಮಾಡಲಾಗುತ್ತಿದೆಯೆಂಬುದು ಮುಖ್ಯವಲ್ಲವೆಂದು ಕುರ್‌ಆನ್ ಅವರ ಸವಾಲಿಗೆ ಉತ್ತರ ನೀಡಿತು.

ಪ್ರಶ್ನೆಗಳು:

1. ಮುಸ್ಲಿಮರ ಪ್ರಥಮ ಕಿಬ್ಲಾ ಯಾವುದು?

2. ಕಿಬ್ಲಾ ಬದಲಾವಣೆ ಯಾವಾಗ ಆಯಿತು?

3. ಕಿಬ್ಲಾ ಬದಲಾವಣೆಯ ಬಗ್ಗೆ ಯಹೂದಿಯರ ಪ್ರತಿಕ್ರಿಯೆ ಏನು? ಕುರ್‌ಆನ್ ಅದಕ್ಕೆ ನೀಡಿದ ಉತ್ತರವೇನು?

3. ಬದ್ರ್ ಯುದ್ಧ

ಅನ್ಯಾಯವಾಗಿ ಯಾವುದೇ ಪ್ರಾಣವನ್ನು ಕೊಲ್ಲುವುದನ್ನೂ ಇಸ್ಲಾಮ್ ಸಮ್ಮತಿಸುವುದಿಲ್ಲ. ಆದರೆ, ಇಸ್ಲಾಮಿನಲ್ಲಿ ವಿಶ್ವಾಸವಿರಿಸಿ ಅದರಂತೆ ಬದುಕಲು ಯಾರಾದರೂ ಅಡ್ಡಿಯುಂಟು ಮಾಡಿದರೆ, ಆ ಅಡ್ಡಿಯನ್ನು ನಿವಾರಿಸಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಅದಕ್ಕಾಗಿ ಯುದ್ಧಕ್ಕೂ ಇಸ್ಲಾಮ್ ಅನುಮತಿ ನೀಡಿದೆ. ಧಾರ್ಮಿಕ ಸ್ವಾತಂತ್ರ್ಯವು ಪ್ರತಿಯೊಬ್ಬ ಮಾನವನ ಮೂಲಭೂತ ಹಕ್ಕಲ್ಲವೇ? ಜನ ಸಮುದಾಯಗಳ ಮಧ್ಯೆ ಶಿಸ್ತು ಮತ್ತು ಶಾಂತಿ ಸ್ಥಾಪನೆಯಾಗಬೇಕೆಂದು ಇಸ್ಲಾಮ್ ಬಯಸುತ್ತದೆ. ಅದನ್ನು ಯಾರಾದರೂ ದ್ವೇಷಿಸಿ, ವಿರೋಧಿಸಿದ ಮಾತ್ರಕ್ಕೆ ಅದು ಸುಮ್ಮನಿರಲಾರದು. ಅದು ವಿರೋಧಗಳನ್ನು ಎದುರಿಸಿ ಮುನ್ನಡೆಯುವ ಆಂದೋಲನವಾಗಿದೆ.

ಮುಸ್ಲಿಮರಿಗೆ ಮದೀನಾದಲ್ಲಿ ಮುಕ್ತ ಸ್ವಾತಂತ್ರ್ಯ ದೊರೆತುದರಿಂದ ಕುರೈಶರ ಕ್ರೋಧ ಕೆರಳಿತು. ಇಸ್ಲಾಮ್ ಧರ್ಮವು ನಾನಾ ಕಡೆಗಳಲ್ಲಿ ಪ್ರಚಾರವಾಗಿ, ಇಡೀ ಅರೇಬಿಯಾವನ್ನು ಅದು ಸ್ವಾಧೀನಪಡಿಸಬಹುದೆಂದು ಅವರು ಹೆದರಿದರು. ಹೇಗಾದರೂ ಮದೀನಾದ ಮೇಲೆ ಆಕ್ರಮಣ ನಡೆಸಿ ಮುಸ್ಲಿಮರನ್ನು ನಾಶಪಡಿಸಬೇಕೆಂದು ಅವರು ಆಲೋಚಿಸಿದರು. ಪ್ರವಾದಿವರ್ಯರಿಗೂ(ಸ) ಕುರೈಶರ ಆಕ್ರಮಣದ ಆಶಂಕೆಯಿತ್ತು. ಅವರ ಯುದ್ಧ ಸಿದ್ಧತೆಗಳನ್ನು ಪ್ರವಾದಿವರ್ಯರು(ಸ) ಕೇಳಿ ತಿಳಿಯುತ್ತಿದ್ದರು.

ಕುರೈಶರ ವ್ಯಾಪಾರಿ ತಂಡವು ಮದೀನಾದ ಸಮೀಪದ ಹಾದಿಯಿಂದ ಸಿರಿಯಾಕ್ಕೆ ಹೋಗಿ ಬರುತ್ತಿತ್ತು. ಆ ಹಾದಿಯಿಂದ ಅವರ ಸಂಚಾರವನ್ನು ತಡೆಯಲು ಪ್ರವಾದಿ ವರ್ಯರು(ಸ) ಹಲವು ಬಾರಿ ಸಣ್ಣ ತಂಡಗಳನ್ನು ಅಲ್ಲಿಗೆ ಕಳುಹಿಸಿದ್ದರು. ಅವರ ಸರಕುಗಳನ್ನು ದೋಚುವ ಬದಲಾಗಿ ಅವರನ್ನು ಮಣಿಸುವುದೇ ಪ್ರವಾದಿವರ್ಯರ(ಸ) ಉದ್ದೇಶವಾಗಿತ್ತು. ಅವರ ಬಲ ಕುಗ್ಗದಿದ್ದರೆ ಅಕ್ರಮ ಕೊನೆಗೊಳ್ಳಲಾರದು. ಅವರು ಮಕ್ಕಾದಲ್ಲಿ ಮುಸ್ಲಿಮರನ್ನು ತೀವ್ರವಾಗಿ ಪೀಡಿಸಿ, ಮನೆ ಮಾರುಗಳನ್ನು ತೊರೆದು ಹೋಗುವಂತೆ ನಿರ್ಬಂಧಿಸಿದ್ದವರಲ್ಲವೇ? ಮುಸ್ಲಿಮರು

ಮದೀನಾಕ್ಕೆ ವಲಸೆ (ಹಿಜ್ರತ್) ಹೋದಾಗ ಕುರೈಶರು ಅವರ ಮನೆ, ಜಮೀನು, ಸಂಪತ್ತುಗಳನ್ನು ವಶಪಡಿಸಿಕೊಂಡಿದ್ದರು. ವ್ಯಾಪಾರದ ಹಾದಿಗೆ ಆತಂಕವೊಡ್ಡಿದರೆ ಅವರು ಒಪ್ಪಂದಕ್ಕೆ ಬರಬಹುದೆಂದು ಮುಸ್ಲಿಮರು ಭಾವಿಸಿದರು.

ಒಮ್ಮೆ ಅಬೂ ಸುಫ್‌ಯಾನ್‌ರ ನಾಯಕತ್ವದಲ್ಲಿ ಕುರೈಶರ ವ್ಯಾಪಾರಿ ತಂಡವು ಸಿರಿಯಾದಿಂದ ಮಕ್ಕಾಕ್ಕೆ ಹಿಂತಿರುಗುತ್ತಿತ್ತು. ಮದೀನಾದ ಸಮೀಪ ತಲಪಿದರೆ ಮುಸ್ಲಿಮರು ವ್ಯಾಪಾರಿ ತಂಡವನ್ನು ತಡೆಯಬಹುದೆಂದು ಅಬೂ ಸುಫ್‌ಯಾನ್ ಶಂಕಿಸಿದರು. ಅಪಾಯ ಭೀತಿಯಿಂದ ವ್ಯಾಪಾರಿ ತಂಡವನ್ನು ರಕ್ಷಿಸಲಿಕ್ಕಾಗಿ ಮಕ್ಕಾದಿಂದ ಕೆಲವು ಮಂದಿಯನ್ನು ಕರೆತರಲು ಅಬೂ ಸುಫ್‌ಯಾನ್ ಓರ್ವರನ್ನು ಕಳುಹಿಸಿದರು. ಆತ ಮಕ್ಕಾಕ್ಕೆ ಹೋಗಿ, "ನಮ್ಮ ವ್ಯಾಪಾರಿ ಸರಕುಗಳನ್ನು ಮುಸ್ಲಿಮರು ದೋಚಿದ್ದಾರೆ. ಅದನ್ನು ಅವರಿಂದ ಮರು ಸ್ವಾಧೀನ ಪಡಿಸಲು ಎಲ್ಲರೂ ಧಾವಿಸಬೇಕು" ಎಂದು ಬೊಬ್ಬೆ ಹಾಕಿದ.

ಇದನ್ನು ಕೇಳಿ ಕ್ರುದ್ಧರಾದ ಕುರೈಶರು ಮದೀನಾವನ್ನು ಆಕ್ರಮಿಸಿ ಧ್ವಂಸಗೊಳಿಸಲು ಸಿದ್ಧರಾದರು. ಯುದ್ಧ ಸನ್ನಾಹಗಳೊಂದಿಗೆ ಒಂದು ಸಾವಿರ ಮಂದಿ ಮದೀನಾದತ್ತ ಹೊರಟರು. ಈ ಎಲ್ಲ ಸುದ್ದಿ ಪ್ರವಾದಿವರ್ಯರಿಗೆ(ಸ) ತಲುಪಿತು. ಆ ವೇಳೆ, "ನಿಮ್ಮ ಮೇಲೆ ಯುದ್ಧ ಸಾರಿದವರೊಡನೆ ನೀವೂ ಯುದ್ಧ ಮಾಡಿರಿ" ಎಂಬ ಅನುಮತಿ ಅಲ್ಲಾಹನಿಂದ ದೊರೆತಿರಲಿಲ್ಲ. ಸಹಾಬಿಗಳು ಯುದ್ಧವನ್ನು ಬಯಸಿಯೂ ಇರಲಿಲ್ಲ. ಯುದ್ಧಕ್ಕೆ ಬೇಕಾದ ಶಸ್ತ್ರಾಸ್ತ್ರ ಅಥವಾ ಇತರ ಸಾಧನಾನುಕೂಲತೆಗಳು ಅವರಲ್ಲಿ ಇರಲಿಲ್ಲ.

ಪ್ರವಾದಿವರ್ಯ(ಸ)ರು ಸಹಾಬಿಗಳೊಡನೆ ಹೀಗೆಂದರು, "ಒಂದೆಡೆ ವ್ಯಾಪಾರಿ ಸರಕುಗಳಿರುವ ಕುರೈಶರ ಪುಟ್ಟ ತಂಡವಿದೆ. ಇನ್ನೊಂದೆಡೆ ಮಕ್ಕಾದಿಂದ ಆಕ್ರಮಣಕ್ಕೆ ಸಜ್ಜಾಗಿ ಬರುತ್ತಿರುವ ಪ್ರಬಲ ತಂಡವಿದೆ. ಈ ಪೈಕಿ ನಾವು ಯಾವುದನ್ನು ಎದುರಿಸೋಣ? ಎರಡರಲ್ಲೊಂದು ತಂಡವನ್ನು ನಮ್ಮ ಅಧೀನಗೊಳಿ ಸುವುದಾಗಿ ಅಲ್ಲಾಹನು ವಾಗ್ದಾನ ನೀಡಿದ್ದಾನೆ."

ಶಸ್ತ್ರ ಸಜ್ಜಿತವಾಗಿ ಪ್ರಬಲ ತಂಡವನ್ನು ಎದುರಿಸುವ ಪರಿಸ್ಥಿತಿ ನಿವಾರಣೆಯಾಗಿದ್ದರೆ ಉತ್ತಮವಿತ್ತೆಂದು ಮುಸ್ಲಿಮರು ಆಗ್ರಹಿಸಿದರು. ಆದರೆ ಅವರು ಮುಂದೆ ಬರಬೇಕಿದ್ದರೆ ಕುರೈಶರ ಪ್ರಬಲ ಸೇನೆಯನ್ನು ಎದುರಿಸಬೇಕಾದುದು ಅನಿವಾರ್ಯವಾಗಿತ್ತು. ತನ್ಮಧ್ಯೆ, ಅಬೂ ಸುಫ್‌ಯಾನ್‌ರ ನಾಯಕತ್ವದಲ್ಲಿದ್ದ ವ್ಯಾಪಾರಿ ತಂಡವು ಸರಕು ಸಹಿತ ಮದೀನಾದಿಂದ ಪಾರಾಗಿ ಬಂದಿದೆಯೆಂಬ ಸುದ್ದಿ ಕುರೈಶರಿಗೆ ಮುಟ್ಟಿದರೂ ಅವರ ಸೇನಾ ನಾಯಕ ಅಬೂಜಹಲ್ ಲೆಕ್ಕಿಸಲಿಲ್ಲ.

ಹೀಗೆ ಕುರೈಶರು ಅಹಂಕಾರದಿಂದ ಯುದ್ಧಕ್ಕೆ ಮುಂದಾದರು. ಪ್ರವಾದಿವರ್ಯರ(ಸ) ನಾಯಕತ್ವದಲ್ಲಿ 313 ಸಹಾಬಿಗಳು ಮದೀನಾದಿಂದ ಬದ್ರ್ ಎಂಬಲ್ಲಿಗೆ ಹೋಗಿ ಬೀಡುಬಿಟ್ಟರು. ಅಲ್ಲಿ ಇತ್ತಂಡಗಳೊಳಗೆ ಘೋರವಾದ ಯುದ್ಧ ನಡೆಯಿತು. ಪ್ರವಾದಿವರ್ಯರು(ಸ) ದೈನ್ಯದಿಂದ ಅಲ್ಲಾಹನೊಡನೆ ಹೀಗೆ ಪ್ರಾರ್ಥಿಸಿದರು, "ಅಲ್ಲಾಹನೇ! ಇದೋ ನಿನ್ನ ಧರ್ಮಕ್ಕಾಗಿ ಒಂದು ಪುಟ್ಟ ತಂಡವು ಹೋರಾಡುತ್ತಿದೆ. ಅಲ್ಲಾಹನೇ, ಇಂದು ಈ ಪುಟ್ಟ ತಂಡವು ಅಳಿದು ಹೋದರೆ, ನಂತರ ನಿನ್ನ ದಾಸ್ಯ-ಆರಾಧನೆಗೆ ಈ ಭೂಮಿಯಲ್ಲಿ ಯಾರೂ ಇರಲಾರರು."

ಅಲ್ಲಾಹನ ಅಪಾರ ಅನುಗ್ರಹದಿಂದ ಮುಸ್ಲಿಮರು ಯುದ್ಧದಲ್ಲಿ ಗೆದ್ದರು. ಅಬೂಜಹಲ್‌ನ ಸಮೇತ ಕುರೈಶಿ ಗಣ್ಯರಲ್ಲಿ 70 ಮಂದಿ ಹತರಾದರು ಮತ್ತು 70 ಮಂದಿ ಕೈದಿಗಳಾದರು. ಮುಸ್ಲಿಮರಲ್ಲಿ ಕೇವಲ 14 ಮಂದಿ ಹುತಾತ್ಮರಾದರು. ಬದ್ರ್ ಯುದ್ಧದಿಂದ ಕುರೈಶರ ಸೊಕ್ಕು ಮುರಿಯಿತು.

ಹಿಜರಿ ಎರಡನೇ ವರ್ಷದ ರಮಝಾನ್ 17ರಂದು ಈ ಯುದ್ಧ ನಡೆದಿತ್ತು.

ಪ್ರಶ್ನೆಗಳು:

1. ಮುಸ್ಲಿಮರು ಕುರೈಶರ ವ್ಯಾಪಾರಿ ತಂಡವನ್ನು ತಡೆದು ನಿಲ್ಲಿಸಿದ್ದೇಕೆ?

2. ಪ್ರವಾದಿವರ್ಯರು(ಸ) ಅಬೂ ಸುಫ್‌ಯಾನ್‌ರ ವ್ಯಾಪಾರಿ ತಂಡವನ್ನು ಆಕ್ರಮಿಸಲಿಕ್ಕಾಗಿ ಮದೀನಾದಿಂದ ಹೊರಟಿದ್ದರೇ? ಹಾಗಾದರೆ ಮದೀನಾದಿಂದ ನೇರವಾಗಿ ಬದ್ರ್‌ಗೆ ಹೋದದ್ದೇಕೆ?

3. ಮುಸ್ಲಿಮರು ಬದ್ರ್‌ನಲ್ಲಿ ಸುಮಾರು ಒಂದು ಸಾವಿರ ಯೋಧರಿದ್ದ ವೈರಿ ಸೇನೆಯೊಂದಿಗೆ ಹೋರಾಡಿ ಜಯಗಳಿಸಿದ ಪ್ರಧಾನ ಕಾರಣಗಳು ಯಾವುವು?

4. ಉಹುದ್ ಯುದ್ಧ

ಬದ್ರ್ ಯುದ್ಧದಲ್ಲಿ ಸೋತ ಕುರೈಶರು ಪ್ರತೀಕಾರಕ್ಕೆ ಸಿದ್ಧತೆ ನಡೆಸಿದರು. ಯಹೂದಿಯರು ಅವರಿಗೆ ಪ್ರೋತ್ಸಾಹ ನೀಡಿದರು. ಮರುವರ್ಷ ಕುರೈಶರ ಮುಖಂಡ ಅಬೂ ಸುಫ್‌ಯಾನ್‌ರ ನಾಯಕತ್ವದಲ್ಲಿ 3,000 ಮಂದಿ ಮದೀನಾದ ಮೇಲೆ ಆಕ್ರಮಣ ಮಾಡಲಿಕ್ಕೆ ಹೊರಟರು. ವೈರಿಗಳನ್ನು ಎದುರಿಸಲಿಕ್ಕಾಗಿ ಪ್ರವಾದಿವರ್ಯರು(ಸ) 1,000 ಯೋಧರ ಜತೆ ಮದೀನಾದಿಂದ ಹೊರಟರು.

ಆದರೆ ಮುನಾಫಿಕರ ಮುಖಂಡ ಅಬ್ದುಲ್ಲಾ ಬಿನ್ ಉಬೈ ತನ್ನ ಅಧೀನವಿದ್ದ 300 ಮಂದಿಯನ್ನು ಹಿಂದಕ್ಕೆ ಕರೆದುಕೊಂಡು ಹೋದನು.

ಉಳಿದ 700 ಯೋಧರು ಪ್ರವಾದಿವರ್ಯರ(ಸ) ನಾಯಕತ್ವದಲ್ಲಿ ಮದೀನಾದಿಂದ 4 ಮೈಲು ದೂರದಲ್ಲಿರುವ 'ಉಹುದ್' ಬೆಟ್ಟದ ತಪ್ಪಲಿನಲ್ಲಿ ಬಿಡಾರ ಹೂಡಿದರು. ಅಲ್ಲಿ ನಿಂತು ಕುರೈಶಿ ಸೇನೆಯನ್ನು ಎದುರಿಸಲು ನಿರ್ಧರಿಸಿದರು.

ವೈರಿಗಳು ಮದೀನಾವನ್ನು ಆಕ್ರಮಿಸುವಾಗ ಅಲ್ಲಿಯೇ ಅವರನ್ನು ಎದುರಿಸಬಹುದೆಂದು ಪ್ರವಾದಿವರ್ಯರು(ಸ) ಭಾವಿಸಿದ್ದರು. ಆದರೆ, ಬದ್ರ್ ಯುದ್ಧದಲ್ಲಿ ಭಾಗವಹಿಸುವ ಅವಕಾಶ ದೊರೆತಿಲ್ಲದ ಯುವ ಸಹಾಬಿಗಳು, ಮದೀನಾದಿಂದ ಹೊರಗೆ ಹೋಗಿ ವೈರಿಗಳನ್ನು ಎದುರಿಸಬೇಕೆಂಬ ಅಭಿಪ್ರಾಯ ಹೊಂದಿದ್ದರು.

ಪ್ರವಾದಿವರ್ಯರು(ಸ) ಅವರ ಸ್ಥೈರ್ಯ ಮತ್ತು ಸ್ಫೂರ್ತಿಯನ್ನು ಮನಗಂಡು ಅವರ ಅಭಿಪ್ರಾಯವನ್ನು ಅಂಗೀಕರಿಸಿದರು. ಈ ನೆಪವನ್ನೇ ಮುಂದೊಡ್ಡಿ ಅಬ್ದುಲ್ಲಾ ಬಿನ್ ಉಬೈ ಮತ್ತು ಸಂಗಡಿಗರು ಹಿಂತಿರುಗಿ ಹೋಗಿದ್ದರು.

ಮುಸ್ಲಿಮ್ ಸೇನೆಯ ಹಿನ್ನೆಲೆಯಲ್ಲಿರುವ ಉಹುದ್ ಪರ್ವತದ ಒಂದೆಡೆಯಲ್ಲಿ ಹಿಂಬದಿಯಿಂದ ಬರುವ ಒಂದು ದಾರಿಯಿತ್ತು. ಪ್ರವಾದಿವರ್ಯರು(ಸ) ಆ ದಾರಿಯನ್ನು ಕಾಯಲಿಕ್ಕಾಗಿ ಅಬ್ದುಲ್ಲಾ ಬಿನ್ ಜುಬೈರ್‌ರ ನಾಯಕತ್ವದಲ್ಲಿ 50 ಬಿಲ್ಲುಗಾರರನ್ನು ನೇಮಿಸಿದರು. ಆಜ್ಞೆ ದೊರೆಯುವ ತನಕ ಅಲ್ಲಿಂದ ಕದಲಬಾರದೆಂದು

ಅವರು ವಿಶೇಷ ಎಚ್ಚರಿಕೆ ನೀಡಿದ್ದರು.

ವೈರಿಗಳು ಮುಸ್ಲಿಮರತ್ತ ಮುನ್ನುಗ್ಗಿದರು. ಘೋರ ಯುದ್ಧ ನಡೆಯಿತು. ಸಹಾಬಿ ಗಳು ವೀರಾವೇಶದಿಂದ ಹೋರಾಡಿದರು. ಮುಸ್ಲಿಮರು ಸ್ವಲ್ಪ ಮೇಲುಗೈ ಸಾಧಿಸಿದರು. ಅವರು 'ಗನೀಮತ್' (ವೈರಿಗಳು ತೊರೆದು ಹೋದ ವಸ್ತುಗಳು) ಸಂಗ್ರಹಿಸತೊಡಗಿ ದರು. ಬೆಟ್ಟದಲ್ಲಿ ಕಾವಲು ನಿಂತಿದ್ದವರು ಇದನ್ನು ನೋಡಿದರು. ಆ ಪೈಕಿ ಹಲವರು ಗನೀಮತ್ ಸಂಗ್ರಹಿಸಲಿಕ್ಕಾಗಿ ಕಾವಲು ಸ್ಥಳವನ್ನು ಬಿಟ್ಟು ಯುದ್ಧರಂಗದತ್ತ ಓಡಿದರು. ಅಬ್ದುಲ್ಲಾ ಬಿನ್ ಜುಬೈರ್‌ರ ಜತೆ. ಕೆಲವು ಮಂದಿ ಮಾತ್ರ ಅಲ್ಲಿ ಉಳಿದರು.

ಇದನ್ನು ಕಂಡು ಕುರೈಶರ ಒಂದು ಸೇನಾ ತುಕಡಿಯು ಬೆಟ್ಟ ಹತ್ತಿ ಬಹಳ ಸುಲಭದಿಂದ ಆ ದಾರಿಯಾಗಿ ಬಂತು. ಬೆಟ್ಟದ ಮೇಲೆ ಉಳಿದಿದ್ದ ಕೆಲವು ಪಹರೆಗಾರರನ್ನು ವಧಿಸಲು ಅವರಿಗೆ ಕಷ್ಟವಾಗಲಿಲ್ಲ. ಅವರು ರಣರಂಗದಲ್ಲಿದ್ದ ಮುಸ್ಲಿಮರನ್ನು ಹಿಂದಿನಿಂದ ಆಕ್ರಮಿಸಿದರು. ಮುಸ್ಲಿಮ್ ಸೇನೆಯ ಸಾಲುಗಳು ಚೆಲ್ಲಾಪಿಲ್ಲಿಯಾದುವು. ಪ್ರವಾದಿವರ್ಯರ(ಸ) ಚಿಕ್ಕಪ್ಪ ಹಮ್‌ಝಾ(ರ) ಸೇರಿದಂತೆ ಅನೇಕ ಸಹಾಬಿಗಳು ಹುತಾತ್ಮರಾದರು.

ಈ ಕೋಲಾಹಲದ ಮಧ್ಯೆ, ಪ್ರವಾದಿವರ್ಯರನ್ನು(ಸ) ವೈರಿಗಳು ಕೊಂದರೆಂಬ ವದಂತಿ ಮುಸ್ಲಿಮರಲ್ಲಿ ಹೇಗೋ ಹಬ್ಬಿತು. ಅದರಿಂದಾಗಿ ಅವರು ಖಿನ್ನರಾದರು. ಆದರೆ, ಪ್ರವಾದಿವರ್ಯರು(ಸ) ಸುರಕ್ಷಿತರಾಗಿರುವರೆಂಬುದು ಅವರಿಗೆ ಕೂಡಲೇ ತಿಳಿಯಿತು. ವೀರ ಯೋಧರಾದ ಕೆಲವು ಸಹಾಬಿಗಳು ಪ್ರವಾದಿವರ್ಯರನ್ನು(ಸ) ಸುತ್ತುವರಿದು ರಕ್ಷಿಸಿದರು. ಹಾಗಿದ್ದರೂ ಪ್ರವಾದಿವರ್ಯರಿಗೆ(ಸ) ಸ್ವಲ್ಪ ಗಾಯವಾಯಿತು. ಪ್ರವಾದಿ(ಸ) ಮತ್ತು ಅನುಯಾಯಿಗಳು ಬೆಟ್ಟದ ಕಡೆಗೆ ಹೋದರು.

ಅದೇ ವೇಳೆ ವೈರಿ ಸೇನೆಯು ಯುದ್ಧರಂಗದಿಂದ ಹೊರಟು ಹೋಯಿತು. ಮುಶ್ರಿಕರಿಗೆ ಗೆಲ್ಲುವ ಅವಕಾಶವಿದ್ದರೂ ಅವರಿಗೆ ಯುದ್ಧವನ್ನು ಪೂರ್ಣಗೊಳಿಸಬೇಕೆಂದು ತೋಚಲಿಲ್ಲ. ನಿರ್ಣಾಯಕ ಹಂತದಲ್ಲಿ ಅಲ್ಲಾಹನು ಇಸ್ಲಾಮ್ ದೀನನ್ನು ರಕ್ಷಿಸುವ ಕ್ರಮವನ್ನು ನೋಡಿರಿ!

ಉಹುದ್ ಯುದ್ಧದಲ್ಲಿ 70 ಸಹಾಬಿಗಳು ಹುತಾತ್ಮರಾದರು. ಕುರೈಶರ ಕಡೆಯಲ್ಲಿ 23 ಮಂದಿ ಕೊಲ್ಲಲ್ಪಟ್ಟರು. ಯಾವುದೇ ತಂಡದ ಯಶಸ್ಸಿಗೆ ಶಿಸ್ತು, ಸಂಯಮ ಮತ್ತು ವಿಧೇಯತೆಯ ಅಗತ್ಯವಿದೆ. ಉಹುದ್ ಯುದ್ಧದ ವೇಳೆ ಪ್ರಸ್ತುತ ಗುಣಗಳಿಗೆ ವಿರುದ್ಧವಾದ ವರ್ತನೆ ಮುಸ್ಲಿಮರಲ್ಲಿ ಕಂಡು ಬಂತು. ಅದರಿಂದಾಗಿ ಅವರು ಸ್ವಲ್ಪ ಸೋಲು ಮತ್ತು ಕಷ್ಟನಷ್ಟ ಅನುಭವಿಸಬೇಕಾಯಿತು. ಅವಿಧೇಯತೆ

ತೋರಿದವರಿಗೆ ಕರುಣಾಳುವಾದ ಅಲ್ಲಾಹನು ಕ್ಷಮೆ ನೀಡಿದನು.

ಪ್ರಶ್ನೆಗಳು:

1. ಉಹುದ್ ಯುದ್ಧ ನಡೆಯಲು ಕಾರಣವೇನು? ಕುರೈಶ್ ಸೇನೆಯಲ್ಲಿ ಎಷ್ಟು ಜನರಿದ್ದರು? ಮುಸ್ಲಿಮ್ ಸೇನೆಯಲ್ಲಿ ಮದೀನಾದಿಂದ ಹೊರಡುವಾಗ ಎಷ್ಟು ಜನರಿದ್ದರು? ಅರ್ಧ ಹಾದಿಯಲ್ಲಿ ಎಷ್ಟು ಮಂದಿ ಮರಳಿದರು? ಅದಕ್ಕೆ ಕಾರಣವೇನು?

2. ಉಹುದ್ ಬೆಟ್ಟದ ಒಳ ಹಾದಿಯಲ್ಲಿ ಎಷ್ಟು ಮಂದಿಯನ್ನು ಪಹರೆಗೆ ನಿಲ್ಲಿಸಲಾಗಿತ್ತು? ಅವರ ನಾಯಕ ಯಾರು? ಅವರಿಗೆ ಪ್ರವಾದಿಯವರು ಯಾವ ಆದೇಶ ನೀಡಿದ್ದರು? ಅವರು ಏನು ಮಾಡಿದರು?

3. ಉಹುದ್‌ನಲ್ಲಿ ಮುಸ್ಲಿಮರಿಗೆ ನಾಶ ನಷ್ಟ ಸಂಭವಿಸಲು ಕಾರಣವೇನು?

5. ಒಪ್ಪಂದ ಉಲ್ಲಂಘನೆ

ಮುಸ್ಲಿಮರು ಮತ್ತು ಯಹೂದಿಯರ ನಡುವೆ ಪರಸ್ಪರ ಸಹಕರಿಸುವ ಕುರಿತು ಮೊದಲೇ ಒಪ್ಪಂದ ನಡೆದಿತ್ತು. ಯಹೂದಿಯರು ಆ ಒಪ್ಪಂದವನ್ನು ಪಾಲಿಸುತ್ತಿದ್ದರೆ ಅವರಿಗೂ ಮುಸ್ಲಿಮರಿಗೂ ಅದರಿಂದ ಹಿತವಾಗುತ್ತಿತ್ತು.

ಆದರೆ ಕೆಲವು ಸಮಯದ ಬಳಿಕ ಅವರು ಒಪ್ಪಂದಕ್ಕೆ ವಿರುದ್ಧವಾಗಿ ವರ್ತಿಸತೊಡಗಿದರು. ಮುಸ್ಲಿಮರು ನಾಶವಾಗಬೇಕೆಂದು ಅವರು ಬಯಸಿದರು. ಅವರು ಗುಪ್ತವಾಗಿಯೂ ಬಹಿರಂಗವಾಗಿಯೂ ಮುಸ್ಲಿಮರನ್ನು ವಿರೋಧಿಸತೊಡಗಿದರು. ಬದ್ರ್ ಯುದ್ಧ ಮುಗಿದ ಕೂಡಲೇ 'ಬನೂ ಕೈನುಕಾ' ಎಂಬ ಯಹೂದಿ ಗೋತ್ರವು ಮುಸ್ಲಿಮರ ಮೇಲೆ ಯುದ್ಧ ಸಾರಿತು.

ಹಾಗೆಯೇ 'ಬನೂ ನದೀರ್' ಎಂಬ ಯಹೂದಿ ಗೋತ್ರವೂ ಹಲವು ಬಾರಿ ಒಪ್ಪಂದ ಉಲ್ಲಂಘಿಸಿ ಪ್ರವಾದಿವರ್ಯರ(ಸ) ಕೊಲೆಗೆ ಸಂಚು ನಡೆಸಿತು. ಅವರ ದ್ರೋಹವು ಮಿತಿಮೀರಿದಾಗ ಹಿಜರಿ 4ನೇ ವರ್ಷದಲ್ಲಿ ಪ್ರವಾದಿ(ಸ) ಮತ್ತು ಸಹಾಬಿಗಳು 15 ದಿನಗಳ ಕಾಲ ಅವರ ಕೋಟೆಗೆ ಮುತ್ತಿಗೆ ಹಾಕಿದರು.

ಅನಂತರ ಪ್ರವಾದಿವರ್ಯರು(ಸ) ಅವರಿಗೆ ದೇಶ ತೊರೆದು ಹೋಗುವ ಅನುಮತಿ ನೀಡಿದರು. ಅವರು ತಮ್ಮ ಚರಸೊತ್ತುಗಳನ್ನು ಒಂಟೆಗಳ ಮೇಲೆ ಹೇರಿ ಊರು ಬಿಟ್ಟರು. ಕೆಲವರು ಖೈಬರಿಗೂ ಇತರ ಕೆಲವರು ಸಿರಿಯಾಕ್ಕೂ ಹೋದರು.

ಪ್ರಶ್ನೆಗಳು:

1. ಯಹೂದಿಯರು ಕರಾರು ಉಲ್ಲಂಘಿಸಿದ ಕೆಲವು ಉದಾಹರಣೆ ತಿಳಿಸಿ?

2. ಮುಸ್ಲಿಮರು 'ಬನೂ ನದೀರ್' ಗೋತ್ರದವರ ಕೋಟೆಗೆ ಮುತ್ತಿಗೆ ಹಾಕಿದ್ದು ಯಾವ ವರ್ಷ? ಯಾವ ದಿನ? ಅದು ಹೇಗೆ ಕೊನೆಗೊಂಡಿತು?

6. ಕಂದಕ್ ಯುದ್ಧ

ಖೈಬರ್‌ಗೆ ವಲಸೆ ಹೋದ ಯಹೂದಿಗಳಾದ ನದೀರ್ ಗೋತ್ರದವರು, ಮುಶ್ರಿಕರಾದ ಕುರೈಶರು ಮತ್ತು ಗತ್ಫಾನೀಯರೆಲ್ಲರೂ ಒಟ್ಟು ಸೇರಿದ ಸುಮಾರು 10,000 ಮಂದಿ ಯೋಧರ ಒಂದು ಬೃಹತ್ ಸೇನೆಯು ಮದೀನಾದ ಮೇಲೆ ಆಕ್ರಮಣಕ್ಕೆ ಸಜ್ಜಾಯಿತು. ಈ ಸುದ್ದಿ ತಿಳಿದ ಪ್ರವಾದಿ(ಸ) ಮತ್ತು ಅವರ ಜತೆಗಿದ್ದ 3,000 ಮಂದಿ ಮುಸ್ಲಿಮರು ಮದೀನಾದ ಹೊರವಲಯದಲ್ಲಿ ಕಂದಕವನ್ನು ತೋಡಿದರು. ಪರ್ಶಿಯಾದಿಂದ ಬಂದು ಪ್ರವಾದಿವರ್ಯರ(ಸ) ಜತೆ ವಾಸವಾಗಿದ್ದ ಸಲ್ಮಾನ್(ರ) ಈ ತಂತ್ರವನ್ನು ಸೂಚಿಸಿದ್ದರು.

5 ಗಜ ಅಗಲ ಮತ್ತು ಆಳದ ಬಹಳ ಉದ್ದವಾದ ಕಂದಕ ತೋಡಲು ಮುಸ್ಲಿಮರಿಗೆ ತುಂಬಾ ಕಷ್ಟವಾಯಿತು. ಸಹಾಬಿಗಳು ಸ್ಥಳವನ್ನು ಹಂಚಿಕೊಂಡು ಕಂದಕ ತೋಡಲಾರಂಭಿಸಿದರು. ಪ್ರವಾದಿವರ್ಯರೂ(ಸ) ತಮ್ಮ ಪಾಲಿನ ಸ್ಥಳವನ್ನು ಸಹಾಬಿಗಳ ಜತೆ ಪಿಕ್ಕಾಸಿನಿಂದ ಅಗೆದರು. ಪ್ರವಾದಿ(ಸ) ಮತ್ತು ಅನುಯಾಯಿಗಳು ಹಸಿವು, ದುಡಿಮೆ ಮತ್ತು ಚಳಿಯಿಂದ ತೀವ್ರವಾಗಿ ಬಳಲಿ ದರು. ವೈರಿಗಳು ನಾನಾ ಕಡೆಗಳಿಂದ ಸುತ್ತುವರಿದರು. ಪ್ರವಾದಿವರ್ಯರು(ಸ) ಅವರು ಅಲ್ಲಾಹನೊಡನೆ ಪ್ರಾರ್ಥಿಸುತ್ತಲಿದ್ದರು.

ಕಂದಕ ತೋಡಿದ್ದಕ್ಕಾಗಿ ಈ ಯುದ್ಧಕ್ಕೆ ಖಂದಕ್ (ಕಂದಕ) ಯುದ್ಧವೆಂದು ಹೆಸರು ಬಂತು. ವೈರಿ ಗುಂಪುಗಳೆಲ್ಲವೂ ಒಟ್ಟಾಗಿ ಮದೀನಾವನ್ನು ನುಂಗಿ ಬಿಡಲು ಸಜ್ಜಾಗಿತ್ತು. ಆದ್ದರಿಂದ ಆತ್ಮರಕ್ಷಣೆಗಾಗಿ ಇಂತಹ ಕಂದಕ ತೋಡುವುದರ ವಿನಾ ಮುಸ್ಲಿಮರಿಗೆ ಅನ್ಯ ಮಾರ್ಗವಿರಲಿಲ್ಲ.

ಕಂದಕದ ಸುತ್ತಮುತ್ತ ಮುಸ್ಲಿಮರು ಮತ್ತು ವೈರಿ ಸೇನೆಯು 20 ದಿನಗಳ ಕಾಲ ತಂಗಿತ್ತು. ಆಗಾಗ ಚಿಕ್ಕಪುಟ್ಟ ಘರ್ಷಣೆಗಳಾಗುತ್ತಿದ್ದುವು. ಕೊನೆಗೆ ವೈರಿ ಸೇನೆ ಯಲ್ಲಿ ಒಡಕುಂಟಾಯಿತು. ಅದಲ್ಲದೇ ವೈರಿ ಸೇನೆಯ ಬಿಡಾರದಲ್ಲಿ ಬಿರುಗಾಳಿ

ಬೀಸಿತು. ಅವರ ಎಲ್ಲ ಯೋಜನೆಯೂ ಅಸ್ತವ್ಯಸ್ತವಾಯಿತು. ಅವರು ಪರಿಭ್ರಾಂತರಾಗಿ ಅಲ್ಲಿಂದ ಓಡಿ ಹೋದರು. ಹೀಗೆ ಅಲ್ಲಾಹನು ಬಿರುಗಾಳಿ ಮತ್ತು ವೈರಿಗಳ ಮನದಲ್ಲಿ ಭೀತಿ ಹುಟ್ಟಿಸುವ ಮೂಲಕ ಮುಸ್ಲಿಮರಿಗೆ ನೆರವು ನೀಡಿರುವುದು ಆತನ ಮಹಾ ಅನುಗ್ರಹವಾಗಿದೆ.

ಹಿಜರಿ 5ನೇ ವರ್ಷದಲ್ಲಿ ಕಂದಕ ಯುದ್ಧ ನಡೆದಿತ್ತು. ಅನೇಕ ವೈರಿ ತಂಡಗಳು ಒಗ್ಗಟ್ಟಾಗಿರುವುದರಿಂದ ಅದನ್ನು 'ಅಹ್‌ಝಾಬ್' ಯುದ್ಧವೆಂದೂ ಕರೆಯಲಾಗುತ್ತದೆ. 'ಬನೂ ಖುರೈಝಾ' ಎಂಬ ಯಹೂದಿ ಗೋತ್ರವೂ ಪ್ರವಾದಿವರ್ಯರ(ಸ) ಜತೆಗಿನ ಒಪ್ಪಂದವನ್ನು ಮುರಿದು ಕಂದಕ ಯುದ್ಧದಲ್ಲಿ ವೈರಿ ಕೂಟವನ್ನು ಸೇರಿತ್ತು. ಮದೀನಾದ ಸಮೀಪ ವಾಸವಾಗಿದ್ದ ಈ ಮಂದಿ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಒಪ್ಪಂದ ಉಲ್ಲಂಘಿಸಿ ದ್ರೋಹವೆಸಗಿದ್ದುದರಿಂದ ಪ್ರವಾದಿ(ಸ) ಮತ್ತು ಸಹಾಬಿಗಳ ಮನಸ್ಸಿಗೆ ನೋವಾಗಿತ್ತು. ಯುದ್ಧ ಮುಗಿದ ಬಳಿಕ ಪ್ರವಾದಿವರ್ಯರು(ಸ) ಅವರತ್ತ ತಿರುಗಿದರು. ಅವರು ಕ್ಷಮೆ ಕೇಳಲಿಲ್ಲ. ಹೀಗೆ ಒಂದು ತಿಂಗಳು ಮುಸ್ಲಿಮರು ಅವರ ಕೋಟೆಗೆ ಮುತ್ತಿಗೆ ಹಾಕಿದರು. ಕೊನೆಗೆ, ಅವರು ಸಅದ್ ಬಿನ್ ಮುಆದ್(ರ)ರ ತೀರ್ಮಾನಕ್ಕೆ ನಾವು ಒಪ್ಪುವುದಾಗಿ ತಿಳಿಸಿದರು. ಯುದ್ಧ ಸಾಮರ್ಥ್ಯವಿರುವ ಪುರುಷರನ್ನು ವಧಿಸಬೇಕು. ಮಹಿಳೆಯರು ಮತ್ತು ಮಕ್ಕಳನ್ನು ಸೆರೆ ಹಿಡಿಯಬೇಕು, ಸಂಪತ್ತು ಇತ್ಯಾದಿಗಳನ್ನು ಸ್ವಾಧೀನಪಡಿಸಬೇಕೆಂದು ಸಅದ್(ರ) ತೀರ್ಪು ನೀಡಿದರು. ಅಂತೆಯೇ ಅವರ ತೀರ್ಪನ್ನು ಜಾರಿಗೊಳಿಸಲಾಯಿತು.

ಪ್ರಶ್ನೆಗಳು:

1. ಕಂದಕ್ ಯುದ್ಧದಲ್ಲಿ ವೈರಿ ಪಕ್ಷದಲ್ಲಿದ್ದ ಗೋತ್ರಗಳು ಯಾವುವು? ಎಷ್ಟು ವೈರಿ ಸೈನಿಕರಿದ್ದರು? ಮುಸ್ಲಿಮ್ ಸೈನಿಕರೆಷ್ಟು?

2. ಕಂದಕ್ ಯುದ್ಧ ಯಾವ ವರ್ಷದಲ್ಲಿ ನಡೆಯಿತು?

3. ಕಂದಕ್ ಘಟನೆ ಹೇಗೆ ನಡೆಯಿತು? ವಿವರಿಸಿರಿ.

4. ಕಂದಕ್ ಘಟನೆಯ ಬಳಿಕ ಪ್ರವಾದಿವರ್ಯರು(ಸ) ಬನೂ ಖುರೈಝಾರನ್ನು ವಿರೋಧಿಸಲು ಕಾರಣವೇನು?

5. ಬನೂ ಖುರೈಝಾದವರ ಬಗ್ಗೆ ಸಅದ್ ಬಿನ್ ಮುಆದ್(ರ) ಯಾವ ತೀರ್ಪು ನೀಡಿದರು?

6. ಕಂದಕ್ ಯುದ್ಧಕ್ಕೆ ಅಹ್‌ಝಾಬ್ ಯುದ್ಧವೆಂಬ ಹೆಸರು ಬರಲು ಕಾರಣವೇನು?

7. ಹುದೈಬಿಯಾ ಒಪ್ಪಂದ

ಹಿಜರಿ 6ನೇ ವರ್ಷದಲ್ಲಿ ಪ್ರವಾದಿ(ಸ) ಮತ್ತು 1400 ಸಹಾಬಿಗಳು ಕಅಬಾ ಸಂದರ್ಶನಕ್ಕಾಗಿ ಮಕ್ಕಾಕ್ಕೆ ಹೊರಟರು. ಅವರು ಬಲಿಮೃಗಗಳನ್ನೂ ಒಯ್ದಿದ್ದರು. 'ಉಮ್ರಾ' ಎಂಬ ಪುಣ್ಯ ಕರ್ಮ ನಿರ್ವಹಣೆಯೇ ಮುಸ್ಲಿಮರ ಆಗಮನೋದ್ದೇಶವೆಂದು ಅರಿತಿದ್ದರೂ ಕುರೈಶರು ಅವರಿಗೆ ಮಕ್ಕಾಕ್ಕೆ ಪ್ರವೇಶಿಸುವ ಅನುಮತಿ ನೀಡಲಿಲ್ಲ. ಮುಹಮ್ಮದ್(ಸ) ಮತ್ತು ಸಂಗಡಿಗರು ಮಕ್ಕಾ ಪ್ರವೇಶಿಸಿದರೆ ನಾವು ಯುದ್ಧ ಮಾಡುವುದಾಗಿ ಅವರು ಸಾರಿದರು. ಪ್ರವಾದಿ(ಸ) ಮತ್ತು ಅನುಯಾಯಿಗಳು ಮಕ್ಕಾ ದಿಂದ ಏಳೆಂಟು ಮೈಲು ದೂರದಲ್ಲಿರುವ 'ಹುದೈಬಿಯಾ' ಎಂಬ ಸ್ಥಳದಲ್ಲಿ ತಂಗಿದರು. ಕುರೈಶರೊಡನೆ ಮಾತುಕತೆ ನಡೆಸಲಿಕ್ಕಾಗಿ ಉಸ್ಮಾನ್(ರ)ರನ್ನು ಕಳುಹಿಸಿದರು. ಅವರು ಉಸ್ಮಾನ್(ರ)ರನ್ನು ದಿಗ್ಬಂಧಿಸಿದರು. ಉಸ್ಮಾನ್(ರ) ವಧಿಸಲ್ಪಟ್ಟರೆಂದು ಭಾವಿ ಸಿದ ಮುಸ್ಲಿಮರು ಕುಪಿತರಾದರು. ಮರಣದ ತನಕ ಪ್ರವಾದಿವರ್ಯರ(ಸ) ಜತೆಗಿದ್ದು ಹೋರಾಟ ನಡೆಸುವುದಾಗಿ ಅವರು ಒಂದು ವೃಕ್ಷದ ಕೆಳಗೆ ಪ್ರವಾದಿವರ್ಯ(ಸ)ರೊಂದಿಗೆ ಪ್ರತಿಜ್ಞೆ (ಬೈಅತ್) ಮಾಡಿದರು. ಈ ಪ್ರತಿಜ್ಞೆಯನ್ನು 'ಬೈಅತುರ್ರಿಝ್ವಾನ್' ಎಂದು ಕರೆಯಲಾಗುತ್ತದೆ. ಮಕ್ಕಾ ನಿವಾಸಿಗಳ ವಿರುದ್ಧ ಯುದ್ಧ ಮಾಡಬೇಕೆಂಬ ಆವೇಶವು ಮುಸ್ಲಿಮರ ಮನದಲ್ಲಿ ಪ್ರಜ್ವಲಿಸುತ್ತಿತ್ತು. ತನ್ಮಧ್ಯೆ ಉಸ್ಮಾನ್(ರ) ಜೀವಂತವಿರುವರೆಂದು ತಿಳಿದು ಬಂತು. ಕೊನೆಗೆ ಪ್ರವಾದಿ(ಸ) ಮತ್ತು ಕುರೈಶರು ಹತ್ತು ವರ್ಷದ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು. ಇದನ್ನು 'ಹುದೈಬಿಯಾ ಒಪ್ಪಂದ' ಎಂದು ಕರೆಯಲಾಗುತ್ತದೆ.

ಮುಸ್ಲಿಮರು ಏನಿದ್ದರೂ ಈ ವರ್ಷ ಮಕ್ಕಾಕ್ಕೆ ಬರಬಾರದು. ಮುಂದಿನ ವರ್ಷ ಬೇಕಿದ್ದರೆ ಮೂರು ದಿನದ ಮಟ್ಟಿಗೆ ಮಕ್ಕಾಕ್ಕೆ ಬಂದು ಉಮ್ರಾ ನಿರ್ವಹಿಸಿ ಹೋಗಬಹುದೆಂದು ಆ ಒಪ್ಪಂದದಲ್ಲಿ ಹೇಳಲಾಗಿತ್ತು. ಮಾತ್ರವಲ್ಲ, ಮುಸ್ಲಿಮ್ ಆಗಿ ಯಾರಾದರೂ ಮಕ್ಕಾದಿಂದ ಮದೀನಾಕ್ಕೆ ಬಂದರೆ ಅವರನ್ನು ಮರಳಿ ಕಳುಹಿಸಬೇಕೆಂದೂ ಮದೀನಾದಿಂದ ಯಾರಾದರೂ ಮಕ್ಕಾಕ್ಕೆ ಬಂದರೆ ಅವರನ್ನು ಮರಳಿ ಕಳಿಸಬೇಕಾಗಿಲ್ಲವೆಂದೂ ಒಪ್ಪಂದದಲ್ಲಿ ನಿರ್ಧರಿಸಲಾಗಿತ್ತು. ಮೇಲ್ನೋಟಕ್ಕೆ ಈ

ಒಪ್ಪಂದವು ಬಹುದೇವಾರಾಧಕರಿಗೆ ಹಿತ ಮತ್ತು ಮುಸ್ಲಿಮರಿಗೆ ಅಹಿತಕರವೆಂದು ಭಾಸವಾದುದರಿಂದ ಅನೇಕ ಸಹಾಬಿಗಳಿಗೆ ಅಸಮಾಧಾನವಾಯಿತು. ಮುಶ್ರಿಕರ ಅಧೀನವಾಗುವ ನೈಜ ಮುಸ್ಲಿಮರಿಗೆ ಅಲ್ಲಾಹನು ರಕ್ಷಣೆಯ ಹಾದಿ ತೋರಿಸುವನೆಂದು ಪ್ರವಾದಿವರ್ಯ(ಸ)ರು ಸಾಂತ್ವನ ಪಡಿಸಿದರು.

ಈ ಒಪ್ಪಂದದಿಂದಾಗಿ ಪ್ರವಾದಿವರ್ಯರು(ಸ) ಮುಶ್ರಿಕರಿಗೆ ಬಹಳಷ್ಟು ಮಣಿದಿರುವರೆಂದು ಬಾಹ್ಯವಾಗಿ ತೋರಿದರೂ ವಸ್ತುಶಃ ಅದರಿಂದಾಗಿ ಇಸ್ಲಾಮ್ ಮತ್ತು ಮುಸ್ಲಿಮರಿಗೆ ಹೆಚ್ಚಿನ ಲಾಭವಿತ್ತು. ಅನಂತರದ ಘಟನೆಗಳಿಂದ ಅದು ವ್ಯಕ್ತವಾಯಿತು. ಆ ತನಕ ಮುಸ್ಲಿಮರು ಮತ್ತು ಮುಶ್ರಿಕರು ಪರಸ್ಪರ ದೂರವಿದ್ದರು. ಒಪ್ಪಂದ ಏರ್ಪಟ್ಟ ಬಳಿಕ ಕಟ್ಟೆಯೊಡೆದಂತೆ ಉಭಯ ಕಡೆಯವರೂ ಪರಸ್ಪರ ವ್ಯವಹಾರಕ್ಕೆ ತೊಡಗಿದರು. ತನ್ಮೂಲಕ ಮುಸ್ಲಿಮರಿಗೆ ಅನೇಕ ಕಡೆ ಹೋಗಿ ನಿರ್ಭೀತಿಯಿಂದ ಇಸ್ಲಾಮೀ ಸಂದೇಶ ಪ್ರಚಾರ ನಡೆಸುವ ಅವಕಾಶ ಸಿಕ್ಕಿತು. ಮುಶ್ರಿಕರಾಗಿದ್ದ ಜನ ಸಾಮಾನ್ಯರಿಗೆ ಇಸ್ಲಾಮಿನ ಶ್ರೇಷ್ಠತೆ ಮತ್ತು ಹಿತವನ್ನು ಕಣ್ಣಾರೆ ನೋಡಿ ತಿಳಿಯಲು ಸಾಧ್ಯವಾಯಿತು. ಆದ್ದರಿಂದ, ಆ ಪೈಕಿ ಅನೇಕ ಮಂದಿ ಇಸ್ಲಾಮ್ ಸ್ವೀಕರಿಸಿದರು. ಈ ಮೂಲಕ ಇಸ್ಲಾಮ್ ಧರ್ಮದ ವಿಕಾಸವನ್ನು ಮನಗಂಡ ಕುರೈಶಿ ನಾಯಕರು ಪರಿಭ್ರಾಂತರಾಗಿ ಒಪ್ಪಂದವನ್ನು ಮುರಿಯಬಯಸಿದರು.

ಹುದೈಬಿಯಾ ಒಪ್ಪಂದದ ಶರ್ತದಂತೆ ಹಿಜರಿ 7ನೇ ವರ್ಷದಲ್ಲಿ ಪ್ರವಾದಿ(ಸ) ಮತ್ತು ಬಹುಮಂದಿ ಮುಸ್ಲಿಮರು ಮಕ್ಕಾಕ್ಕೆ ಬಂದು ಕಅಬಾ ಸಂದರ್ಶಿಸಿ ಉಮ್ರಾ ನಿರ್ವಹಿಸಿದರು. ಇದರಿಂದ ಮುಸ್ಲಿಮರಿಗೆ ಬಹಳ ಸಂತೋಷವಾಯಿತು. ಅದೇ ವೇಳೆ ಮುಶ್ರಿಕರಿಗೆ ಸೋಲಿನ ಭಾವನೆಯುಂಟಾಯಿತು.

ಅರೇಬಿಯಾದ ಕೆಲವೆಡೆಗಳಲ್ಲಿ ಹಾಗೂ ನೆರೆದೇಶಗಳಲ್ಲಿಯೂ ಅನೇಕ ರಾಜಂದಿರು ಮತ್ತು ಸುಬೇದಾರರಿದ್ದರು. ಹುದೈಬಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಪ್ರವಾದಿ ವರ್ಯರು(ಸ) ಅವರಿಗೆ ಪತ್ರವನ್ನು ಕಳುಹಿಸಿ ಅವರನ್ನು ಇಸ್ಲಾಮಿಗೆ ಆಹ್ವಾನಿಸಿದರು.

ಪ್ರಶ್ನೆಗಳು:

1. ಹುದೈಬಿಯಾ ಒಪ್ಪಂದಕ್ಕೆ ಕಾರಣವೇನೆಂದು ವಿವರಿಸಿರಿ.
2. ಹುದೈಬಿಯಾದಲ್ಲಿ ಪ್ರವಾದಿವರ್ಯರ(ಸ) ಜತೆ ಎಷ್ಟು ಸಹಾಬಿಗಳಿದ್ದರು?
3. 'ಬೈಅತುರ್ರಿಝ್ವಾನ್' ಎಂದರೇನು? ಅದಕ್ಕೆ ಕಾರಣವೇನು?
4. ಹುದೈಬಿಯಾ ಒಪ್ಪಂದದ ಪ್ರಧಾನ ನಿಬಂಧನೆಗಳು ಯಾವುವು? ಒಪ್ಪಂದವು ಮುಸ್ಲಿಮರಿಗೆ ಹಿತಕರವಾದುದು ಹೇಗೆ?

8. ರಾಜಂದಿರಿಗೆ ಪತ್ರಗಳು

ಪ್ರವಾದಿವರ್ಯ(ಸ)ರು ಅರೇಬಿಯಾದ ನೆರೆಕರೆಯ ರಾಜರಿಗೆ ಮತ್ತು ಆಡಳಿತ ಗಾರರಿಗೆ ಪತ್ರಗಳನ್ನು ರವಾನಿಸಿ ಅವರನ್ನು ಇಸ್ಲಾಮಿಗೆ ಆಹ್ವಾನಿಸುತ್ತಿದ್ದರು. ಆ ಪತ್ರ ಗಳಿಗೆ 'ಮುಹಮ್ಮದರ್ರಸೂಲುಲ್ಲಾಹ್' ಎಂಬ ಮುದ್ರೆಯನ್ನು ಒತ್ತಲಾಗುತ್ತಿತ್ತು.

ಇಸ್ಲಾಮ್, ಸಕಲ ಮಾನವರ ಧರ್ಮವಾಗಿರುವುದರಿಂದ ಎಲ್ಲರಿಗೂ ಅದನ್ನು ಪರಿಚಯಿಸಿ ಎಲ್ಲರನ್ನೂ ಅದರತ್ತ ಆಹ್ವಾನಿಸುವುದು ಮುಸ್ಲಿಮರ ಕರ್ತವ್ಯವಾಗಿದೆ.

ಪರ್ಶಿಯ ಮತ್ತು ರೋಮ್‌ಗಳು ಆ ಕಾಲದ ಎರಡು ಬೃಹತ್ ಸಾಮ್ರಾಜ್ಯ ಗಳಾಗಿದ್ದುವು. ಪರ್ಶಿಯಾದ ಚಕ್ರವರ್ತಿಗಳನ್ನು ಕಿಸ್ರಾ (ಖುಸ್ರೋ) ಮತ್ತು ರೋಮನ್ ಚಕ್ರವರ್ತಿಗಳನ್ನು ಕೈಸರ್ (ಸೀಝರ್) ಎಂದು ಕರೆಯಲಾಗುತ್ತಿತ್ತು. ಹರ್ಕ್ಯುಲಿಸ್ ರಾಜನು ಅಂದಿನ ಕೈಸರ್ ಆಗಿದ್ದನು. ಪ್ರವಾದಿವರ್ಯರು(ಸ) ದಿಹ್‌ಯತುಲ್ ಕಲ್ಬಿ ಎಂಬ ಸಹಾಬಿಯ ಮೂಲಕ ಹರ್ಕ್ಯುಲಿಸ್‌ರಿಗೆ ಪತ್ರ ಕಳುಹಿಸಿದರು. ದಿಹ್‌ಯಾರು ಅರಮನೆಗೆ ತೆರಳಿ ಪ್ರವಾದಿವರ್ಯರ(ಸ) ಪತ್ರವನ್ನು ನೀಡಿದರು.

ಹರ್ಕ್ಯುಲಿಸ್‌ರಿಗೆ ಪ್ರವಾದಿವರ್ಯರ(ಸ) ಕುರಿತು ಹೆಚ್ಚಿನ ವಿವರಗಳನ್ನು ತಿಳಿ ಯುವ ಕುತೂಹಲ ಉಂಟಾಯಿತು. ತನ್ನ ದೇಶದಲ್ಲಿ ಮಕ್ಕಾದಿಂದ ಬಂದವರು ಯಾರಾದರೂ ಇದ್ದರೆ ಕರೆತರುವಂತೆ ಆಜ್ಞಾಪಿಸಿದರು. ಆ ವೇಳೆ ಅಬೂಸುಫ್‌ಯಾನ್‌ರ ನಾಯಕತ್ವದ ಒಂದು ವ್ಯಾಪಾರಿ ತಂಡವು ಅಲ್ಲಿಗೆ ಆಗಮಿಸಿತ್ತು. ಅಬೂ ಸುಫ್‌ಯಾನ್‌ರನ್ನು ಅರಮನೆಗೆ ಕರೆಸಿ ಪ್ರವಾದಿವರ್ಯರ(ಸ) ಕುರಿತು ವಿಚಾರಿಸಿದರು.

ಅವರು ನೀಡಿದ ವಿವರಣೆಗಳನ್ನು ಆಲಿಸಿದ ಚಕ್ರವರ್ತಿ ಹೀಗೆಂದರು, "ಅವರು ಖಂಡಿತವಾಗಿಯೂ ಪ್ರವಾದಿಯಾಗಿದ್ದಾರೆ. ಶೀಘ್ರದಲ್ಲಿಯೇ ಓರ್ವ ಪ್ರವಾದಿ ಆಗಮಿಸ ಲಿರುವರೆಂಬುದು ನನಗೆ ತಿಳಿದಿತ್ತು. ಆದರೆ ಅವರು ನಿಮ್ಮ ಗೋತ್ರದವರಾಗಿರಬಹುದೆಂದು ನಾನು ಭಾವಿಸಿರಲಿಲ್ಲ. ನಾನು ಅವರ ಬಳಿಯಿರುತ್ತಿದ್ದರೆ ಅವರ ಪಾದಗಳನ್ನು ತೊಳೆಯುತ್ತಿದ್ದೆ."

ಪ್ರವಾದಿವರ್ಯರು ಇನ್ನೊಂದು ಪತ್ರವನ್ನು ಪರ್ಶಿಯಾದ ಕಿಸ್ರಾ ಚಕ್ರವರ್ತಿ 'ಅಬ್ರವೀಸ್'ಗೆ ಬರೆದಿದ್ದರು. ಅಬ್ದುಲ್ಲಾ ಬಿನ್ ಹುದಾಫಃ ಎಂಬ ಸಹಾಬಿ ಆ ಪತ್ರ ತಲಪಿಸಿದ್ದರು. ದುರಹಂಕಾರಿಯಾಗಿದ್ದ ಕಿಸ್ರಾ ಪತ್ರವನ್ನು ನೋಡಿ ಕುಪಿತನಾಗಿ ಅದನ್ನು ಹರಿದು ಚಿಂದಿ ಮಾಡಿದನು. ಈ ಸುದ್ದಿ ತಿಳಿದ ಪ್ರವಾದಿವರ್ಯರು(ಸ) ಕಿಸ್ರಾನ ಅಧಿಕಾರವೂ ಅದೇ ರೀತಿ ನಾಶವಾಗುವುದೆಂದು ಹೇಳಿದರು. ಉಮರ್‌ರ(ರ) ಆಡಳಿತ ಕಾಲದಲ್ಲಿ ಕಿಸ್ರಾ ಸಾಮ್ರಾಜ್ಯವನ್ನು ಮುಸ್ಲಿಮರು ಜಯಿಸಿದರು. ಆ ಮೂಲಕ ಪ್ರವಾದಿವರ್ಯರ(ಸ) ಮಾತು ಸಾಕ್ಷಾತ್ಕಾರಗೊಂಡಿತು.

ಅಬಿಸೀನಿಯಾ(ಇತಿಯೋಪಿಯಾ)ದ ನಜ್ಜಾಶಿ (ನೇಗಸ್) ರಾಜರಿಗೂ ಪ್ರವಾದಿ ವರ್ಯರು(ಸ) ಪತ್ರ ಕಳುಹಿಸಿದ್ದರು. ಮೊದಲೇ ಇಸ್ಲಾಮಿನ ಕುರಿತು ಮುಸ್ಲಿಮರಿಂದ ಕೇಳಿ ತಿಳಿದಿದ್ದ ನಜ್ಜಾಶಿ ರಾಜರು ಪತ್ರ ತಂದ ಸೇವಕನನ್ನು ಗೌರವಾದರದಿಂದ ಬರಮಾಡಿಕೊಂಡು ಪತ್ರವನ್ನು ಪಡೆದು ಚುಂಬಿಸಿ ಆ ಕೂಡಲೇ 'ಶಹಾದತ್ ಕಲಿಮ'(ಸಾಕ್ಷ್ಯವಚನ)ವನ್ನು ಹೇಳಿ ಇಸ್ಲಾಮ್ ಸ್ವೀಕರಿಸಿದರು. ತಾನು ಮುಸ್ಲಿಮನಾಗುವ ವಿಷಯವನ್ನು ತಿಳಿಸಿ ಪ್ರವಾದಿವರ್ಯರಿಗೆ(ಸ) ಉತ್ತರ ಬರೆದರು.

ಈಜಿಪ್ಟ್‌ನ ಆಡಳಿತಗಾರ 'ಮುಕೌಕಿಸ್'ರಿಗೂ ಪ್ರವಾದಿ(ಸ) ಪತ್ರ ಕಳುಹಿಸಿದ್ದರು. ಕ್ರೈಸ್ತ ರಾಜರಾಗಿದ್ದ ಮುಕೌಕಿಸ್, ಪತ್ರ ತಂದ ಪ್ರವಾದಿವರ್ಯರ(ಸ) ದೂತನೊಂದಿಗೆ ಗೌರವದಿಂದ ವರ್ತಿಸಿದರು. ಇಬ್ಬರು ಗುಲಾಮ ಸ್ತ್ರೀಯರು ಮತ್ತು ಹೇರಳ ಉಡುಗೊರೆಗಳನ್ನು ಪ್ರವಾದಿವರ್ಯ(ಸ)ರಿಗೆ ಕಳುಹಿಸಿ ಕೊಟ್ಟರು. ಆ ಪೈಕಿ 'ಮಾರಿಯ ಕಿಬ್ತಿಯಾ' ಎಂಬ ಸ್ತ್ರೀಯನ್ನು ಪ್ರವಾದಿವರ್ಯ(ಸ)ರು ವಿವಾಹವಾದರು. ಅವರಲ್ಲಿ ಪ್ರವಾದಿವರ್ಯರಿಗೆ(ಸ) ಇಬ್ರಾಹೀಮ್ ಎಂಬ ಮಗು ಜನಿಸಿತ್ತು.

ಹೀಗೆ ಇಸ್ಲಾಮಿನ ಧ್ವನಿಯು ಎಲ್ಲೆಡೆ ವ್ಯಾಪಿಸಿತು. ಕೆಲವೇ ವರ್ಷಗಳಲ್ಲಿ ಆ ಎಲ್ಲ ರಾಷ್ಟ್ರಗಳೂ ಇಸ್ಲಾಮಿನ ಅಧೀನವಾದುವು.

ಪ್ರಶ್ನೆಗಳು:

1. ಕಿಸ್ರಾ ಮತ್ತು ಕೈಸರ್ ಎಂದು ಯಾರನ್ನು ಕರೆಯುತ್ತಾರೆ?
2. ಪ್ರವಾದಿವರ್ಯರು(ಸ) ಯಾವ ರಾಜರಿಗೆಲ್ಲ ಪತ್ರ ಕಳುಹಿಸಿದ್ದರು?
3. ಪ್ರವಾದಿವರ್ಯರ(ಸ) ಪತ್ರಕ್ಕೆ ಕಿಸ್ರಾ ತೋರಿದ ಪ್ರತಿಕ್ರಿಯೆ ಏನು?

9. ಖೈಬರ್ ಯುದ್ಧ

ಖೈಬರ್ ಎಂಬ ಪ್ರದೇಶವು ಮದೀನಾದ ವಾಯುವ್ಯ ದಿಕ್ಕಿನಲ್ಲಿ ಸುಮಾರು 200 ಮೈಲು ದೂರದಲ್ಲಿದೆ. ಅದು ಯಹೂದಿಗಳ ಕೇಂದ್ರವಾಗಿತ್ತು. ಮದೀನಾದಿಂದ ಹೊರ ಹಾಕಲ್ಪಟ್ಟ ಬನೂ ನಝೀರ್ ಎಂಬ ಯಹೂದೀ ಗೋತ್ರದ ಅನೇಕ ಮಂದಿ ಅಲ್ಲಿ ಹೋಗಿ ನೆಲೆಸಿದ್ದರು.

ಅಲ್ಲಿನ ಯಹೂದಿಯರು ಮದೀನಾವನ್ನು ಆಕ್ರಮಿಸುವಂತೆ ಅನೇಕ ಅರಬ್ ಗೋತ್ರಗಳಿಗೆ ಪ್ರಚೋದನೆ ನೀಡುತ್ತಿದ್ದರು. ಅವರ ದ್ರೋಹವನ್ನು ಬಗೆಹರಿಸಲಿಕ್ಕಾಗಿ ಪ್ರವಾದಿವರ್ಯರು(ಸ) ಅವರೊಂದಿಗೆ ಒಪ್ಪಂದದ ಪ್ರಯತ್ನ ನಡೆಸಿದರು. ಹಾಗಿದ್ದರೂ ಅವರು ಇಸ್ಲಾಮೀ ರಾಷ್ಟ್ರವಾಗಿರುವ ಮದೀನಾವನ್ನು ನಾಶಪಡಿಸುವ ಸಂಚುಗಳನ್ನು ಕೊನೆಗೊಳಿಸಲಿಲ್ಲ. ಆದ್ದರಿಂದ ಶತ್ರುಗಳ ಕೇಂದ್ರವನ್ನು ಮಣಿಸುವುದು ಅನಿವಾರ್ಯ ವಾಯಿತು.

ಪ್ರವಾದಿವರ್ಯ(ಸ)ರು 1,600 ಯೋಧರ ಜತೆ ಮದೀನಾದಿಂದ ಹೊರಟರು. ಅವರಲ್ಲಿ 200 ಮಂದಿ ಕುದುರೆ ಸವಾರ ಯೋಧರಿದ್ದರು. ಹಿಜರಿ 7ನೇ ವರ್ಷದಲ್ಲಿ ಈ ಕಾರ್ಯಾಚರಣೆ ನಡೆದಿತ್ತು. ಯಹೂದಿಯರು ಒಪ್ಪಂದಕ್ಕೆ ಸಿದ್ಧರಿಲ್ಲವೆಂದು ಮನಗಂಡ ಮುಸ್ಲಿಮರು ಯುದ್ಧದ ನಿರ್ಧಾರ ಮಾಡಿದರು.

20 ದಿನಗಳ ಕಾಲ ಅವರ ಕೋಟೆಗೆ ಮುತ್ತಿಗೆ ಹಾಕಿದರು. ಕೊನೆಗೆ ಅವರ ಕೋಟೆಯನ್ನೂ ಖೈಬರ್ ಪ್ರದೇಶವನ್ನೂ ಮುಸ್ಲಿಮರು ಗೆದ್ದುಕೊಂಡರು. ಈ ಯುದ್ಧದಲ್ಲಿ 15 ಮುಸ್ಲಿಮರು ಹುತಾತ್ಮರಾದರು. 93 ಯಹೂದಿಯರು ಕೊಲ್ಲಲ್ಪಟ್ಟರು.

ಯಹೂದಿ ಸೇನೆಯ ಶೂರ ಯೋಧ ಮರ್ಹಬ್, ಅಲೀ(ರ)ಯವರ ಖಡ್ಗಕ್ಕೆ ಬಲಿಯಾದಾಗ ಯಹೂದಿಯರು ಹೆದರಿದರು.

ಖೈಬರ್ ಪ್ರದೇಶವನ್ನು ಮುಸ್ಲಿಮರು ಸ್ವಾಧೀನಪಡಿಸಿದಾಗ ಅಲ್ಲಿ ಯಹೂದಿಯರು ಪ್ರವಾದಿ(ಸ) ಅವರೊಡನೆ ಹೀಗೆ ವಿನಂತಿಸಿದರು,

"ಈ ಪ್ರದೇಶವನ್ನು ನಮ್ಮ ಸ್ವಾಧೀನವೇ ಕೊಡಬೇಕು. ನಾವು ಬೆಳೆಯ ಅರ್ಧಾಂಶ ವನ್ನು ನೀಡುತ್ತೇವೆ." ಪ್ರವಾದಿವರ್ಯರು(ಸ) ಅವರ ವಿನಂತಿಗೆ ಒಪ್ಪಿದರು.

ಪ್ರಶ್ನೆಗಳು:

1. ಖೈಬರ್‌ಗೆ ಸೇನೆ ಹೋಗಲು ಕಾರಣವೇನು? ಅದರಲ್ಲಿ ಪ್ರವಾದಿವರ್ಯ(ಸ) ರೊಂದಿಗೆ ಎಷ್ಟು ಯೋಧರಿದ್ದರು?

2. ಖೈಬರ್ ಯುದ್ಧ ಹೇಗೆ ಕೊನೆಗೊಂಡಿತು?

10. ಮಕ್ಕಾ ವಿಜಯ

ಕುರೈಶರು ಮುಸ್ಲಿಮರ ಪಕ್ಷದಲ್ಲಿದ್ದ ಖುಝಾಆ ಗೋತ್ರದವರ ರಕ್ತ ಚೆಲ್ಲುವ ಮೂಲಕ ಹುದೈಬಿಯಾ ಕರಾರನ್ನು ಉಲ್ಲಂಘಿಸಿದರು. ಅವರು ಪುನಃ ಕರಾರನ್ನು ಊರ್ಜಿತಗೊಳಿಸ ಬಯಸಿದರೂ ಅವರನ್ನು ನಂಬುವಂತಿರಲಿಲ್ಲ. ಅಲ್ಲಾಹನ ಅನುಗ್ರಹದಿಂದ ಮಕ್ಕಾವನ್ನು ಗೆಲ್ಲಬೇಕೆಂದು ಪ್ರವಾದಿವರ್ಯರು(ಸ) ನಿರ್ಧರಿಸಿದರು. ಮಕ್ಕಾದ ಕಅಬಾ ಭವನವನ್ನು ಪ್ರವಾದಿ ಇಬ್ರಾಹೀಮ್(ಅ)ರು ಕೇವಲ ಅಲ್ಲಾಹನ ಆರಾಧನೆಗಾಗಿ ನಿರ್ಮಿಸಿದ್ದರು. ಮುಶ್ರಿಕರು ಅಲ್ಲಿ ಮೂರ್ತಿಗಳನ್ನಿಟ್ಟು ಅದನ್ನು ಮಲಿನಗೊಳಿಸಿದ್ದರು. ಆ ಪವಿತ್ರ ಭವನವನ್ನು ನಿರ್ಮಿಸಿದ ಉದ್ದೇಶಕ್ಕಾಗಿ, ಅದನ್ನು ಮರುಸ್ವಾಧೀನ ಪಡಿಸಿ ಶುದ್ಧೀಕರಿಸುವುದು ಅತ್ಯಗತ್ಯವಾಗಿತ್ತು. ಅದು ಕುರೈಶರ ಅಧೀನ ವಿದ್ದುದರಿಂದ ಅಲ್ಲಾಹನ ಆರಾಧನೆಗಾಗಿ ಅಲ್ಲಿಗೆ ಹೋಗಲು ಸಾಧ್ಯವಿರಲಿಲ್ಲ. ಆದ್ದ ರಿಂದ ಅದರ ವಿಮೋಚನೆ ಅನಿವಾರ್ಯವಾಯಿತು. ಪ್ರವಾದಿವರ್ಯರು(ಸ) ಮಕ್ಕಾವನ್ನು ಅಧೀನ ಪಡಿಸುವ ಸಿದ್ಧತೆಯಲ್ಲಿರುವ ಸುದ್ದಿಯು ಕುರೈಶರಿಗೆ ತಿಳಿಯದಂತೆ ಎಚ್ಚರಿಕೆ ವಹಿಸಿದರು.

ಹಿಜರಿ 8ನೇ ವರ್ಷದ ರಮಝಾನ್ 10ರಂದು 10,000 ಸಹಾಬಿಗಳ ಜತೆ ಪ್ರವಾದಿವರ್ಯರು(ಸ) ಮಕ್ಕಾಕ್ಕೆ ಹೊರಟರು. ಮಕ್ಕಾಕ್ಕೆ ಹೋಗುವ ಒಂದು ಹಾದಿಯ ಮೂಲಕ ಪ್ರವಾದಿ(ಸ), ಇನ್ನೊಂದು ಹಾದಿಯಿಂದ ಖಾಲಿದ್ ಬಿನ್ ವಲೀದ್(ರ)ರ ನಾಯಕತ್ವದಲ್ಲಿ ಸೇನೆಯು ಪ್ರವೇಶಿಸಿ ಮಕ್ಕಾವನ್ನು ಸ್ವಾಧೀನಪಡಿಸಿತು. ಖಾಲಿದ್(ರ)ರ ನಾಯಕತ್ವದಲ್ಲಿದ್ದ ಸೇನೆಯೊಂದಿಗೆ ಹಾದಿಯಲ್ಲಿ ಕೆಲವು ಮುಶ್ರಿಕರು ಘರ್ಷಣೆಗೆ ತೊಡಗಿದುದರಿಂದ ಮೂವರು ಮುಸ್ಲಿಮರು ಹುತಾತ್ಮರಾದರು. 13 ಮುಶ್ರಿಕರು ಹತರಾದರು. ಇದರ ಹೊರತು ಇನ್ನಾವುದೇ ಘರ್ಷಣೆ ಅಥವಾ ರಕ್ತಪಾತ ನಡೆಯದೆ ಮುಸ್ಲಿಮರು ಮಕ್ಕಾವನ್ನು ಗೆದ್ದುಕೊಂಡರು. ಪ್ರಾಣ ಹಾನಿಯನ್ನು ಆದಷ್ಟು ತಪ್ಪಿಸಬೇಕೆಂಬ ವಿಶೇಷ ಆಜ್ಞೆಯನ್ನು ಪ್ರವಾದಿವರ್ಯರು(ಸ) ನೀಡಿದ್ದರು.

ಪ್ರವಾದಿವರ್ಯರು(ಸ) ಮಕ್ಕಾಕ್ಕೆ ಪ್ರವೇಶಿಸುವುದಕ್ಕಿಂತ ಮುಂಚೆ ಅಬ್ಬಾಸ್(ರ)ರು

ಅಬೂ ಸುಫ್‌ಯಾನ್‌ರನ್ನು ಅವರ ಬಳಿಗೆ ಕರೆತಂದರು. ಓರ್ವ ಕುರೈಶಿ ನಾಯಕರಾಗಿದ್ದ ಅಬೂ ಸುಫ್‌ಯಾನ್, ಈ ಹಿಂದೆ ಮದೀನಾ ಆಕ್ರಮಿಸಿ ನಾಶಪಡಿಸಲು ಹಾಗೂ ಪ್ರವಾದಿವರ್ಯರನ್ನು(ಸ) ಕೊಲ್ಲಲು ಹಲವು ರೀತಿಯಿಂದ ಶ್ರಮಿಸಿದ್ದರು.

ಹಾಗಿದ್ದರೂ ಪ್ರವಾದಿವರ್ಯರು(ಸ) ಅವರ ವಿರುದ್ಧ ಯಾವುದೇ ಪ್ರತೀಕಾರ ಕ್ರಮ ಕೈಗೊಳ್ಳಲಿಲ್ಲ. ಮಾತ್ರವಲ್ಲ, ಅವರಿಗೆ ಕ್ಷಮೆ ನೀಡಿ, ಮರಳಿ ಹೋಗುವಂತೆ ತಿಳಿಸಿದರು. ಆದರೆ ಅವರು ಇಸ್ಲಾಮ್ ಸ್ವೀಕರಿಸಿ ಮುಸ್ಲಿಮರ ಜತೆಗೂಡಿದರು.

ಮಕ್ಕಾವನ್ನು ಜಯಿಸಿದ ಬಳಿಕ ಪ್ರವಾದಿವರ್ಯರು(ಸ) ಆ ತನಕ ತಮ್ಮನ್ನೂ ಮುಸ್ಲಿಮರನ್ನೂ ಪೀಡಿಸುತ್ತಿದ್ದ ಎಲ್ಲರಿಗೂ ಸಾಮೂಹಿಕ ಕ್ಷಮಾದಾನ ನೀಡಿದರು.

ಅವರು ಪ್ರವಾದಿವರ್ಯರ(ಸ) ಅಧೀನರಾದಾಗ ಭವಿಷ್ಯದ ಬಗ್ಗೆ ಭಯಭೀತರಾಗಿದ್ದರು. ಪ್ರವಾದಿ ವರ್ಯರು(ಸ) ಅವರೊಡನೆ ಹೀಗೆಂದರು, "ನಿಮ್ಮ ವಿರುದ್ಧ ಯಾವ ಪ್ರತೀಕಾರ ಕ್ರಮವನ್ನೂ ಕೈಗೊಳ್ಳುವುದಿಲ್ಲ. ನೀವು ಸ್ವತಂತ್ರರು, ನೀವು ಹೋಗಬಹುದು."

ಪ್ರವಾದಿವರ್ಯರ(ಸ) ಔದಾರ್ಯ, ವಿಶಾಲ ಮನೋಭಾವ ಮತ್ತು ಸಹಾನುಭೂತಿಯನ್ನು ನೋಡಿ ವೈರಿಗಳ ಮನಸ್ಸು ಕರಗಿತು. ಜನರು ತಂಡೋಪತಂಡವಾಗಿ ಇಸ್ಲಾಮ್ ಸ್ವೀಕರಿಸಿದರು. ಪ್ರವಾದಿವರ್ಯರ(ಸ) ಸಾಮೂಹಿಕ ಕ್ಷಮಾದಾನದಿಂದ ಆರೇಳು ಮಂದಿ ಮಾತ್ರ ಹೊರತಾಗಿದ್ದರು. ಅವರ ಘೋರ ಅಪರಾಧಗಳಿಗಾಗಿ ಮರಣ ದಂಡನೆ ವಿಧಿಸಲಾಯಿತು.

ಜಗತ್ತಿಗೆ ಅನುಗ್ರಹವಾಗಿ ನೇಮಕಗೊಂಡ ಪ್ರವಾದಿವರ್ಯರು(ಸ) ಜನರ ಹಿತ ರಕ್ಷಣೆಗಾಗಿ ಇಸ್ಲಾಮ್ ಧರ್ಮಕ್ಕೆ ವಿಜಯವನ್ನು ತಂದು ಕೊಟ್ಟರು. ಅವರು ಆ ವಿಜಯ ಸಾಧನೆಗಾಗಿ ಅಹಂಕಾರ ಪಡದೆ ಮತ್ತಷ್ಟು ವಿನಯಶೀಲರಾದರು.

ಕಅಬಾದಲ್ಲಿ 360 ವಿಗ್ರಹಗಳಿದ್ದುವು. ಕಅಬಾ ಮುಸ್ಲಿಮರ ಅಧೀನವಾದಾಗ ಅವುಗಳ ಆರಾಧಕರು ಹತಾಶರಾದರು. ಪ್ರವಾದಿವರ್ಯರ(ಸ) ಆದೇಶದಂತೆ ಅವುಗಳನ್ನು ಅಲ್ಲಿಂದ ತೊಲಗಿಸಿ ನಾಶಪಡಿಸಲಾಯಿತು.

ಪ್ರವಾದಿವರ್ಯರು(ಸ) ತಕ್ಬೀರ್ ಘೋಷಣೆಯಿಂದ ಅಲ್ಲಾಹನನ್ನು ಸ್ತುತಿಸುತ್ತಾ ಕಅಬಾದ ಪ್ರದಕ್ಷಿಣೆ ನಡೆಸಿ, 'ಮಕಾಮು ಇಬ್ರಾಹೀಮ್' ಎಂಬ ಸ್ಥಳದಲ್ಲಿ ನಮಾಝ್ ನಿರ್ವಹಿಸಿದರು. ಕಅಬಾದಲ್ಲಿ ಮೊದಲ 'ಅದಾನ್' ನೀಡುವ ಹೊಣೆಯನ್ನು ಹ. ಬಿಲಾಲ್(ರ)ರಿಗೆ ಒಪ್ಪಿಸಿದರು.

ಕರಿಯ ನೀಗ್ರೋ ಗುಲಾಮರಾಗಿದ್ದ ಬಿಲಾಲ್(ರ)ರಿಗೆ ಆ ಘನ ಹೊಣೆಯನ್ನು ನೀಡುವ ಮೂಲಕ ಇಸ್ಲಾಮಿನ ಸಮಾನತೆ-ಸಹೋದರತೆಯನ್ನು ಜಗತ್ತಿನ ಮುಂದೆ ಎತ್ತಿ ತೋರಿಸಿದರು.

ಪ್ರಶ್ನೆಗಳು:

1. ಮಕ್ಕಾ ವಿಜಯದ ವೇಳೆ ಪ್ರವಾದಿವರ್ಯ(ಸ)ರೊಂದಿಗೆ ಎಷ್ಟು ಸೈನಿಕರಿದ್ದರು? ಮಕ್ಕಾ ವಿಜಯ ಯಾವ ವರ್ಷದಲ್ಲಿ ನಡೆಯಿತು?

2. ಮಕ್ಕಾ ವಿಜಯದ ಬಳಿಕ ಕುರೈಶಿ ಮುಶ್ರಿಕರು ಪ್ರವಾದಿವರ್ಯರ(ಸ) ಅಧೀನವಾದಾಗ ಪ್ರವಾದಿವರ್ಯರು(ಸ) ಅವರೊಂದಿಗೆ ಹೇಗೆ ವರ್ತಿಸಿದರು? ಅವರೊಡನೆ ಏನು ಹೇಳಿದರು?

3. ಕಅಬಾದಲ್ಲಿ ಎಷ್ಟು ಮೂರ್ತಿಗಳನ್ನು ಸ್ಥಾಪಿಸಲಾಗಿತ್ತು? ಮಕ್ಕಾ ವಿಜಯದ ಬಳಿಕ ಅವುಗಳನ್ನು ಏನು ಮಾಡಲಾಯಿತು?

11. ಹುನೈನ್ ಯುದ್ಧ

ಮಕ್ಕಾ ವಿಜಯದ ಬಳಿಕ ಪ್ರವಾದಿವರ್ಯರು(ಸ) ತೋರಿದ ಔದಾರ್ಯ ಮತ್ತು ಕರುಣೆಯಿಂದ ಜನರ ಮನ ಪರಿವರ್ತನೆಯಾಯಿತು. ಅರೇಬಿಯಾದ ಹೃದಯ ಭಾಗವಾಗಿದ್ದ ಮಕ್ಕಾ ನಗರವು ಮುಸ್ಲಿಮರ ಅಧೀನವಾದಾಗ ಬಹುದೇವಾರಾಧಕರು ಸಾಮೂಹಿಕವಾಗಿ ಇಸ್ಲಾಮ್ ಸ್ವೀಕರಿಸಿದರು. ಇಸ್ಲಾಮಿನ ನೀತಿ ನಿಯಮಗಳನ್ವಯ ಜೀವನ ಸಾಗಿಸುವುದಾಗಿ ಅನೇಕ ಅರಬ್ ಗೋತ್ರಗಳು ಸಾರಿದುವು. ಅವರ ನಿಯೋಗ ಗಳು ಪ್ರವಾದಿವರ್ಯರ(ಸ) ಬಳಿ ಬಂದು ಇಸ್ಲಾಮ್ ಸ್ವೀಕರಿಸುತ್ತಿದ್ದವು.

ಆದರೆ, 'ಹವಾಝಿನ್' ಮತ್ತು 'ಸಕೀಫ್' ಎಂಬೆರಡು ಗೋತ್ರದವರು ತಮ್ಮ ಹಠ ಬಿಡಲಿಲ್ಲ. ಅವರು ಮುಸ್ಲಿಮರ ವಿರುದ್ಧ ಯುದ್ಧದ ತೀರ್ಮಾನ ಕೈಗೊಂಡರು. ಅವರ ಯುದ್ಧ ಸಿದ್ಧತೆಯನ್ನು ಅರಿತ ಪ್ರವಾದಿವರ್ಯರು(ಸ) ಸೇನೆಯ ಜತೆ ಮಕ್ಕಾದಿಂದ ಆ ಪ್ರದೇಶಕ್ಕೆ ಹೊರಟರು.

ಮಕ್ಕಾದಿಂದ ಸ್ವಲ್ಪ ದೂರದಲ್ಲಿದ್ದ ಆ ಪ್ರದೇಶವನ್ನು ಹುನೈನ್ ಎಂದು ಕರೆಯಲಾಗುತ್ತಿತ್ತು. ಹುನೈನ್‌ಗೆ ತೆರಳುವಾಗ ಪ್ರವಾದಿವರ್ಯರ(ಸ) ಜತೆ ಮಕ್ಕಾ ವಿಜಯದ ಸಂದರ್ಭದಲ್ಲಿ ಇಸ್ಲಾಮ್ ಸ್ವೀಕರಿಸಿದ 2,000 ಮಂದಿಯೂ ಸೇರಿ 12,000 ಸೈನಿಕರಿದ್ದರು. ಆದ್ದರಿಂದ ನಮ್ಮ ಸಂಖ್ಯೆ ಹೆಚ್ಚಿದೆಯೆಂಬ ಭಾವನೆ ಮುಸ್ಲಿಮರಲ್ಲಿ ಮೂಡಿತು. 'ಈ ಬಾರಿ ನಾವು ಗೆಲ್ಲುವುದು ಖಚಿತ. ಇಂದು ನಾವೇನೂ ಹೆದರಬೇಕಾಗಿಲ್ಲ. ನಾವು ಬಹುಸಂಖ್ಯೆಯಲ್ಲಿದ್ದೇವೆ' ಎಂದು ಕೆಲವರು ಹೇಳಿದರು.

ಇಂತಹ ಅಹಂಕಾರ ಮುಸ್ಲಿಮರಿಗೆ ತಕ್ಕುದಲ್ಲ. ಅಲ್ಲಾಹನ ಸಹಾಯ ಮತ್ತು ಬೆಂಬಲ ದೊರೆಯಬೇಕೆಂಬ ಭಾವನೆಯು ಅವರ ಮನದಲ್ಲಿ ಸದಾ ಇರಬೇಕು. ಹುನೈನ್ ಯುದ್ಧಕ್ಕೆ ಹೋಗುವಾಗ ಮುಸ್ಲಿಮರು ತಮ್ಮ ಶಕ್ತಿ ಮತ್ತು ಸೇನಾ ಬಲದ ಬಗ್ಗೆ ಸ್ವಲ್ಪ ಅಹಂಕಾರ ತೋರಿದುದಕ್ಕಾಗಿ ಅಲ್ಲಾಹನು ಅವರಿಗೆ ಬುದ್ಧಿ ಕಲಿಸಿದನು.

ಹುನೈನ್‌ನಲ್ಲಿ ವೈರಿಗಳು ಬೆಟ್ಟದ ಮರೆಯಿಂದ ಬಾಣಗಳ ಸುರಿಮಳೆಗರೆದರು.

ಮುಸ್ಲಿಮ್ ಸೇನೆ ದಿಗ್ಭ್ರಾಂತರಾಗಿ ಚೆಲ್ಲಾಪಿಲ್ಲಿಯಾಯಿತು. ಅನೇಕ ಮಂದಿ ರಣರಂಗದಿಂದ ಪಲಾಯನ ಮಾಡಿದರು.

ಆದರೆ ಎಲ್ಲರೂ ಕಂಗಾಲಾಗಿ ಚೆಲಾಪಿಲ್ಲಿಯಾದರೂ ಪ್ರವಾದಿವರ್ಯರು(ಸ) ಯುದ್ಧ ರಂಗದಲ್ಲಿ ಅಚಲರಾಗಿ ನಿಂತರು. ಅಂತೆಯೇ ದೃಢವಾಗಿ ನಿಂತು ಹೋರಾಡು ವಂತೆ ಸೈನಿಕರಿಗೆ ಕರೆಕೊಟ್ಟರು. ಕೊನೆಗೆ ಅಲ್ಲಾಹನ ಅನುಗ್ರಹದಿಂದ ಮುಸ್ಲಿಮ್ ಸೇನೆಯು ಸ್ಫೂರ್ತಿಯಿಂದ ಮುನ್ನುಗ್ಗಿ ವಿಜಯ ಸಾಧಿಸಿತು.

ಈ ಯುದ್ಧದಲ್ಲಿ ವೈರಿ ಸೇನೆಯ 70 ಮಂದಿ ಹತರಾದರು. ಸಾವಿರಾರು ಯೋಧರು ಕೈದಿಗಳಾದರು. ವೈರಿಗಳ ಅಳಿದುಳಿದ ಸೇನೆಯು ತಾಯಿಫ್‌ನ ಒಂದು ಕೋಟೆಯಲ್ಲಿ ಆಶ್ರಯ ಪಡೆಯಿತು. ಪ್ರವಾದಿವರ್ಯ(ಸ)ರ ಸೇನೆಯು 20 ದಿನಗಳ ಕಾಲ ಆ ಕೋಟೆಯನ್ನು ದಿಗ್ಬಂಧಿಸಿತು. ಆ ಬಳಿಕ ವೈರಿ ತಂಡವು ದುರ್ಬಲಗೊಂಡಿದೆ ಯೆಂದು ಮನಗಂಡ ಪ್ರವಾದಿವರ್ಯರು(ಸ) ಅವರನ್ನು ತೊರೆದು ಮದೀನಾಕ್ಕೆ ಮರಳಿದರು. ಮದೀನಾಕ್ಕೆ ಮರಳುವಾಗ ಸಕೀಫ್ ಗೋತ್ರದವರಿಗೆ ಸನ್ಮಾರ್ಗ ಪ್ರಾಪ್ತವಾಗಲೆಂದು ಪ್ರವಾದಿವರ್ಯರು(ಸ) ಪ್ರಾರ್ಥಿಸಿದರು.

ಸಾಮಾನ್ಯವಾಗಿ ಯುದ್ಧದಲ್ಲಿ ದೊರೆತ ಸಂಪತ್ತನ್ನು ಪ್ರವಾದಿವರ್ಯರು(ಸ) ಅದರಲ್ಲಿ ಭಾಗವಹಿಸಿದ ಯೋಧರಿಗೆ ವಿತರಿಸುತ್ತಿದ್ದರು. ಆದರೆ ಈ ಯುದ್ಧದಲ್ಲಿ ದೊರೆತ ಸೊತ್ತಿನ ಬಹುಭಾಗವನ್ನು ಪ್ರವಾದಿವರ್ಯರು(ಸ) ನವಮುಸ್ಲಿಮರಿಗೆ ನೀಡಿದರು.

ಪ್ರಶ್ನೆಗಳು:

1. ಹುನೈನ್ ಯುದ್ಧಕ್ಕೆ ಕಾರಣವೇನು? ಅಲ್ಲಿ ವಾಸವಾಗಿದ್ದ ಗೋತ್ರದ ಹೆಸರೇನು?

2. ಹುನೈನ್‌ನಲ್ಲಿ ಪ್ರವಾದಿವರ್ಯ(ಸ)ರೊಂದಿಗೆ ಎಷ್ಟು ಸೈನಿಕರಿದ್ದರು?

3. ಹುನೈನ್ ಯುದ್ಧದಲ್ಲಿ ಎಷ್ಟು ಮುಶ್ರಿಕರು ವಧಿಸಲ್ಪಟ್ಟರು?

4. ಹುನೈನ್ ಯುದ್ಧದಲ್ಲಿ ದೊರೆತ ಹೆಚ್ಚಿನ ಸೊತ್ತುಗಳನ್ನು ನವ ಮುಸ್ಲಿಮರಿಗೆ ವಿತರಣೆ ಮಾಡಿದ್ದೇಕೆ?

5. ಹುನೈನ್ ಯುದ್ಧದಲ್ಲಿ ಮುಸ್ಲಿಮರು ಆರಂಭದಲ್ಲಿ ಅಧೀರರಾಗಲು ಕಾರಣವೇನು?

12. ತಬೂಕ್ ಯುದ್ಧ

ಸಿರಿಯಾದ ಗಡಿ ಪ್ರದೇಶಗಳು ಅರೇಬಿಯಾದ ಉತ್ತರ ಭಾಗದಲ್ಲಿರುವ ರೋಮನ್ ಸಾಮ್ರಾಜ್ಯದ ಅಧೀನವಿತ್ತು. ಅಲ್ಲಿ ವಾಸವಾಗಿದ್ದ ಕ್ರೈಸ್ತರ ಬಳಿಗೆ ಪ್ರವಾದಿವರ್ಯರು(ಸ) ಒಂದು ಪ್ರತಿನಿಧಿ ತಂಡವನ್ನು ಕಳುಹಿಸಿದರು. ಅವರು ಆ ತಂಡದಲ್ಲಿದ್ದ 15 ಮಂದಿಯನ್ನು ನಿಷ್ಕರುಣೆಯಿಂದ ಕೊಂದರು. ಸಿರಿಯಾದ ಪ್ರಮುಖ ನಗರವಾಗಿದ್ದ ಬಸ್ರಾದ ನಾಯಕ 'ಶುರ್ಜೈಲ್'ನಿಗೆ ಪ್ರವಾದಿವರ್ಯರ(ಸ) ವತಿಯಿಂದ ಇಸ್ಲಾಮೀ ಸಂದೇಶವನ್ನು ತಲಪಿಸಲಿಕ್ಕಾಗಿ ತೆರಳಿದ ದೂತನನ್ನೂ ಅವರು ಕೊಂದು ಹಾಕಿದರು.

ಆದ್ದರಿಂದ ಹಿಜರಿ 8ನೇ ವರ್ಷದಲ್ಲಿ ಪ್ರವಾದಿವರ್ಯರು(ಸ) 3,000 ಮುಸ್ಲಿಮರನ್ನು ಸಿರಿಯಾದ ಗಡಿಗೆ ಕಳುಹಿಸಿದರು. ಈ ಸುದ್ದಿ ತಿಳಿದ ಶುರ್ಜೈಲ್ ಒಂದು ಲಕ್ಷ ಸೈನಿಕರನ್ನು ಸಜ್ಜುಗೊಳಿಸಿದನು. ಅದರ ಜತೆಗೆ ರೋಮ್‌ನ ಕೈಸರ್ ರಾಜನೂ ಒಂದು ಲಕ್ಷ ಸೈನಿಕರನ್ನು ಕಳುಹಿಸಿದನು. ಪ್ರಸ್ತುತ ಎರಡು ಲಕ್ಷ ಸೈನಿಕರನ್ನು ಮೂರು ಸಾವಿರ ಮುಸ್ಲಿಮರು 'ಮೂತಾ' ಎಂಬ ಸ್ಥಳದಲ್ಲಿ ಎದುರಿಸಿ ದರು. ಆ ಮಹಾ ಸೇನೆಯ ವಿರುದ್ಧ ಮುಸ್ಲಿಮರು ವೀರಾವೇಶದಿಂದ ಹೋರಾಡಿದರು.

ಮುಸ್ಲಿಮರ ಶಕ್ತಿ, ಧೈರ್ಯ ಮತ್ತು ಮನೋಸ್ಥೈರ್ಯವನ್ನು ನೋಡಿ ಪರಿಸರದ ಗೋತ್ರಗಳ ಜನರು ಚಕಿತರಾದರು. ಅವರು ಇಸ್ಲಾಮಿನ ಶಕ್ತಿಯ ಬಗ್ಗೆ ಆಲೋಚಿಸಿದರು. ಆ ಮೂಲಕ ಸಹಸ್ರಾರು ಮಂದಿ ಇಸ್ಲಾಮ್ ಧರ್ಮ ಸ್ವೀಕರಿಸಿದರು.

ಮುಂದಿನ ವರ್ಷ 'ಮೂತಾ ಘಟನೆ'ಯ ಸೇಡು ತೀರಿಸಲಿಕ್ಕಾಗಿ ಕೈಸರ್ ರಾಜನು ಸಿರಿಯಾದ ಕ್ರೈಸ್ತ ಗೋತ್ರಗಳ ಜತೆಗೂಡಿ ಭಾರೀ ಸೇನೆಯನ್ನು ಸಜ್ಜುಗೊಳಿಸುತ್ತಿದ್ದಾನೆಂದು ಪ್ರವಾದಿವರ್ಯರಿಗೆ(ಸ) ತಿಳಿಯಿತು. ಅವರು ರೋಮ್ ಸಾಮ್ರಾಜ್ಯದ ವಿರುದ್ಧ ಯುದ್ಧಕ್ಕೆ ಸಿದ್ಧರಾಗುವಂತೆ ಸಹಾಬಿಗಳಿಗೆ ಆದೇಶಿಸಿದರು.

ಮದೀನಾದಲ್ಲಿ ಜನರು ತೀವ್ರ ಬಡತನ ಮತ್ತು ಅತಿ ಉಷ್ಣದಿಂದ ಬಳಲುತ್ತಿದ್ದರು. ಅದೇ ವೇಳೆ ಪ್ರಬಲ ರೋಮನ್ ಸಾಮ್ರಾಜ್ಯದೊಂದಿಗೆ ಯುದ್ಧ ಮಾಡುವ ಪರಿಸ್ಥಿತಿ

ಬಂದಿತ್ತು. ಅದಲ್ಲದೇ ಸುದೀರ್ಘ ಪಯಣಕ್ಕಾಗಿ ವಾಹನ ಇತ್ಯಾದಿಗಳು ಸಜ್ಜುಗೊಳಿಸ ಬೇಕಾಗಿತ್ತು. ಆದರೆ ಮಾಡುವುದೇನು? ಮುಸ್ಲಿಮರು ಕೈ ಕಟ್ಟಿ ಕುಳಿತರೆ ರೋಮನ್ ಸಾಮ್ರಾಜ್ಯವು ಮದೀನಾವನ್ನು ನುಂಗಿ ಬಿಡದಿದ್ದೀತೇ?

ಆದ್ದರಿಂದ ಯುದ್ಧ ಅನಿವಾರ್ಯವಾಗಿತ್ತು. ಮುಸ್ಲಿಮರು ಬಹಳ ತೊಂದರೆಗೀಡಾದರು. ಯುದ್ಧದ ನಿಧಿಗೆ ಸಹಾಯ ನೀಡುವಂತೆ ಪ್ರವಾದಿವರ್ಯರು(ಸ) ಮನವಿ ಮಾಡಿದರು. ಎಲ್ಲರೂ ಶಕ್ತ್ಯಾನುಸಾರ ವಂತಿಗೆ ನೀಡಿದರು. ಅಬೂಬಕರ್ ಸಿದ್ದೀಕ್(ರ) ತಮ್ಮ ಬಳಿಯಿದ್ದ ಎಲ್ಲ ಸೊತ್ತನ್ನೂ ಯುದ್ಧದ ನಿಧಿಗೆ ದಾನ ಮಾಡಿದರು. ಉಮರ್(ರ)ರು ತಮ್ಮ ಸಂಪತ್ತಿನ ಅರ್ಧಾಂಶವನ್ನು ನೀಡಿದರು. ಸುಸ್ಥಿತಿಯಲ್ಲಿದ್ದ ಸಹಾಬಿಗಳೆಲ್ಲರೂ ಉದಾರವಾಗಿ ದಾನ ನೀಡಿದರು. ಮಹಿಳೆಯರು ಆಭರಣಗಳನ್ನು ಕಳಚಿಕೊಟ್ಟರು.

ಹಿಜರಿ 9ನೇ ವರ್ಷದ ರಜಬ್ ತಿಂಗಳಲ್ಲಿ ಪ್ರವಾದಿವರ್ಯರು(ಸ) 35,000 ಯೋಧರ ಜತೆ ಸಿರಿಯಾಕ್ಕೆ ಹೊರಟರು. ತಬೂಕ್‌ಗೆ ತಲಪಿದಾಗ ವೈರಿ ಸೇನೆಯು ಬಾರದಿರುವುದರಿಂದ ಮುಸ್ಲಿಮರಿಗೆ ಹೋರಾಡುವ ಅಗತ್ಯ ಬೀಳಲಿಲ್ಲ. ಹಿಂದಿನ ವರ್ಷ 3,000 ಮುಸ್ಲಿಮರು ಎರಡು ಲಕ್ಷ ಮಂದಿಯನ್ನು ದಿಗ್ಭ್ರಾಂತಗೊಳಿಸಿದ ಘಟನೆಯು ಸಿರಿಯನರು ಮತ್ತು ಕೈಸರ್ ರಾಜರು ಮರೆತಿರಲಿಲ್ಲ. ಈ ಬಾರಿ ಪ್ರವಾದಿ ವರ್ಯರ(ಸ) ನಾಯಕತ್ವದಲ್ಲಿ ಸುಸಜ್ಜಿತರಾದ 35,000 ಯೋಧರು ಆಗಮಿಸುವರೆಂಬ ಸುದ್ದಿ ಕೇಳಿ ಸೇನೆಯನ್ನು ಹಿಂದಕ್ಕೆ ಕರೆಸಿರುವುದರಲ್ಲಿ ಅಚ್ಚರಿಯಿಲ್ಲ.

ಪ್ರವಾದಿ(ಸ) ಮತ್ತು ಅನುಯಾಯಿಗಳು 20 ದಿನಗಳ ಕಾಲ ತಬೂಕ್‌ನಲ್ಲಿ ತಂಗಿದರು. ಯುದ್ಧ ನಡೆಯದಿದ್ದರೂ ರೋಮನರ ಅಧೀನವಿದ್ದ ಬಹುತೇಕ ತುಂಡು ರಾಜ್ಯಗಳು ಇಸ್ಲಾಮೀ ರಾಷ್ಟ್ರಕ್ಕೆ ಸೇರಿದುವು. ಅನೇಕ ಪ್ರದೇಶಗಳ ಜನರು ಮುಸ್ಲಿಮರೊಂದಿಗೆ ಸೌಹಾರ್ದದಿಂದ ವರ್ತಿಸುವ ಮಾತು ಕೊಟ್ಟರು.

ಪ್ರವಾದಿವರ್ಯರು(ಸ) ತಬೂಕ್ ಯುದ್ಧಕ್ಕೆ ಸಿದ್ಧತೆ ನಡೆಸಬೇಕೆಂದು ತಿಳಿಸಿದಾಗ ಅನೇಕ ಕಪಟವಿಶ್ವಾಸಿಗಳು 'ಕುಂಟುನೆಪ'ಗಳನ್ನು ಹೇಳಿ ಜಾರಿಕೊಂಡರು. ಮಾತ್ರವಲ್ಲ, ಸತ್ಯವಿಶ್ವಾಸಿಗಳಾದ ಮುಸ್ಲಿಮರಲ್ಲಿಯೂ ಒಡಕು ಹುಟ್ಟಿಸಲು ಪ್ರಯತ್ನಿಸಿದರು. ಪ್ರವಾದಿ(ಸ) ಮತ್ತು ಸಹಾಬಿಗಳು ತಬೂಕಿಗೆ ಹೋಗಿದ್ದಾಗ ಈ ಮುನಾಫಿಕರು ಮದೀನಾದಲ್ಲಿ 'ಮಸ್ಜಿದಿಲ್ ಝಿರಾರ್' ಎಂಬ ಹೆಸರಿನ ಮೂರನೆಯ ಮಸೀದಿಯೊಂದನ್ನು ನಿರ್ಮಿಸಿದರು. ಮುಸ್ಲಿಮರ ವಿರುದ್ಧ ಅಲ್ಲಿ ಒಳಸಂಚು ನಡೆಸುವುದೇ ಅವರ ಉದ್ದೇಶವಾಗಿತ್ತು. ಪ್ರವಾದಿವರ್ಯರು(ಸ) ತಬೂಕ್‌ನಿಂದ ಮರಳಿದ ಬಳಿಕ ಅಲ್ಲಾಹನ ಆಜ್ಞೆಯಂತೆ, ಕಪಟವಿಶ್ವಾಸಿಗಳೊಂದಿಗೆ ಕಟುವಾಗಿ

ವರ್ತಿಸಿದರು. ಕಅಬ್, ಮುರಾರಃ ಮತ್ತು ಹಿಲಾಲ್(ರ) ಎಂಬ ಮೂವರು ಸಹಾಬಿಗಳು ಆಲಸ್ಯದಿಂದಾಗಿ ಪ್ರವಾದಿ ವರ್ಯ(ಸ)ರ ಜತೆ ತಬೂಕ್‌ಗೆ ಹೋಗಿರಲಿಲ್ಲ. ಅವರು ಸತ್ಯವಿಶ್ವಾಸಿಗಳೇ ಆಗಿದ್ದರು. ಕಪಟವಿಶ್ವಾಸಿಗಳಾಗಿರಲಿಲ್ಲ. ಪ್ರವಾದಿವರ್ಯರು(ಸ) ಅವರ ಮೇಲೆ ಶಿಸ್ತು ಕ್ರಮ ಕೈಗೊಂಡರು. ಅವರೊಂದಿಗೆ ಯಾರೂ ಮಾತಾಡಬಾರದೆಂದು ಮುಸ್ಲಿಮರಿಗೆ ಆಜ್ಞಾಪಿಸಿದರು. 50 ದಿನಗಳ ಬಳಿಕ ಅವರ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸಿರುವನೆಂಬ ಕುರ್‌ಆನ್ ವಾಕ್ಯವು ಅವತೀರ್ಣಗೊಂಡ ಬಳಿಕ ಮುಸ್ಲಿಮರು ಅವರೊಂದಿಗಿನ ಅಸಹಕಾರವನ್ನು ಹಿಂತೆಗೆದು ಕೊಂಡರು.

ಪ್ರಶ್ನೆಗಳು:

1. 'ಮೂತಾ' ಘಟನೆಯನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

2. ತಬೂಕ್ ಯುದ್ಧ ಯಾವ ವರ್ಷದಲ್ಲಿ ನಡೆಯಿತು? ಕಾರಣವೇನು? ತಬೂಕ್‌ಗೆ ಪ್ರವಾದಿವರ್ಯರ(ಸ) ಜತೆ ಎಷ್ಟು ಯೋಧರು ಹೋಗಿದ್ದರು?

3. ತಬೂಕ್ ಘಟನೆ ಹೇಗೆ ಕೊನೆಗೊಂಡಿತು?

4. 'ಝಿರಾರ್' ಮಸೀದಿಯನ್ನು ಯಾರು, ಯಾಕೆ ಕಟ್ಟಿಸಿದರು?

13. ವಿದಾಯ ಹಜ್ಜ್

ಪ್ರವಾದಿವರ್ಯರು(ಸ) ಮದೀನಾಕ್ಕೆ ವಲಸೆ ಹೋದ ಬಳಿಕ ಒಂದು ಬಾರಿ ಮಾತ್ರ ಹಜ್ಜ್ ನಿರ್ವಹಿಸಿದ್ದರು. ಅದು ಪ್ರವಾದಿವರ್ಯರ(ಸ) ಪ್ರಥಮ ಮತ್ತು ಕೊನೆಯ ಹಜ್ಜ್ ಆಗಿತ್ತು. ಆ ಹಜ್ಜ್‌ನ ಕೊನೆಯಲ್ಲಿ ಪ್ರವಾದಿವರ್ಯರು(ಸ) ತಮ್ಮ ಭಾಷಣದಲ್ಲಿ ವಿದಾಯ ಕೋರುವ ಮಾತುಗಳನ್ನು ಹೇಳಿದ್ದರು. ಆದ್ದರಿಂದಲೇ ಅದನ್ನು 'ವಿದಾಯ ಹಜ್ಜ್' ಎಂದು ಕರೆಯಲಾಗುತ್ತದೆ.

ಮಕ್ಕಾ ವಿಜಯದ ಬಳಿಕ ಹಿಜರಿ 9ನೇ ವರ್ಷದಲ್ಲಿ ಅಬೂಬಕರ್ ಸಿದ್ದೀಕ್(ರ)ರ ನಾಯಕತ್ವದಲ್ಲಿ 300 ಮುಸ್ಲಿಮರು ಹಜ್ಜ್ ನಿರ್ವಹಿಸಿದ್ದರು. ಹಿಜರಿ 10ನೇ ವರ್ಷದಲ್ಲಿ ಜರಗಿದ ಹಜ್ಜತುಲ್ ವಿದಾಅ್‌ನಲ್ಲಿ ಪ್ರವಾದಿವರ್ಯರ(ಸ) ಜತೆ ಒಂದೂ ಕಾಲು ಲಕ್ಷ ಅನುಯಾಯಿಗಳು ಭಾಗವಹಿಸಿದ್ದರು. 'ಅರಫಾ'ದಲ್ಲಿ ನೆರೆದಿದ್ದ ಆ ಬೃಹತ್ ಜನಸ್ತೋಮದ ಮುಂದೆ ಪ್ರವಾದಿವರ್ಯರು(ಸ) ಭಾಷಣ ಮಾಡಿದರು. ಆ ಐತಿಹಾಸಿಕ ಭಾಷಣದ ಕೆಲವು ಪ್ರಧಾನ ಅಂಶಗಳು ಹೀಗಿವೆ:

"ಜನರೇ, ಇನ್ನು ಮುಂದೆ ನಿಮ್ಮನ್ನು ನೋಡುವ ಅವಕಾಶ ನನಗೆ ದೊರೆಯದಿರಬಹುದು. ಮಾನವರೆಲ್ಲರೂ ಸಮಾನರು. ಅರಬನಿಗೆ ಅರಬೇತರನಿಗಿಂತ ಅಥವಾ ಅರಬೇತರನಿಗೆ ಅರಬನಿಗಿಂತ ಯಾವುದೇ ಶ್ರೇಷ್ಠತೆಯಿಲ್ಲ. ಮುಸ್ಲಿಮರು ಪರಸ್ಪರ ಸಹೋದರರು. ನೀವು ಪರಸ್ಪರ ರಕ್ತಪಾತ ಮಾಡಬೇಡಿರಿ. ಸೊತ್ತುಗಳನ್ನು ಅಪಹರಿಸಬೇಡಿರಿ. ಪರಸ್ಪರರನ್ನು ಅಪಮಾನಿಸಬೇಡಿರಿ. ಸೇವಕರೊಂದಿಗೆ ಕ್ರೂರವಾಗಿ ವರ್ತಿಸಬೇಡಿರಿ. ನೀವು ತಿನ್ನುವ ಆಹಾರವನ್ನೇ ಅವರಿಗೂ ನೀಡಬೇಕು. ನೀವು ಧರಿಸುವ ಬಟ್ಟೆಯನ್ನೇ ಅವರಿಗೂ ತೊಡಿಸಬೇಕು. ಬಡ್ಡಿ ವ್ಯವಸ್ಥೆಯನ್ನು ನಾನು ರದ್ದು ಪಡಿಸಿದ್ದೇನೆ. ಬಡ್ಡಿಯ ಸೊತ್ತನ್ನು ಬಳಸಬೇಡಿರಿ. ಮಹಿಳೆಯರನ್ನು ಹಿಂಸಿಸಬೇಡಿರಿ. ಒಂದು ವಿಷಯವನ್ನು ನಾನು ನಿಮಗೆ ವಹಿಸಿ ಕೊಡುತ್ತೇನೆ. ಅದನ್ನು ನೀವು ಬಿಗಿಹಿಡಿದರೆ ನೀವು ಖಂಡಿತ ದಾರಿತಪ್ಪಲಾರಿರಿ. ಅದು ಅಲ್ಲಾಹನ ಗ್ರಂಥವಾಗಿರುವ ಪವಿತ್ರ ಕುರ್‌ಆನ್ ಆಗಿದೆ. ಇಲ್ಲಿ ಹಾಜರಿರುವವರು ಹಾಜರಿಲ್ಲದವರಿಗೆ ತಲಪಿಸಬೇಕು..."

ಹೀಗೆ ಸುದೀರ್ಘ ಭಾಷಣ ಮಾಡಿದ ಬಳಿಕ ಪ್ರವಾದಿ(ಸ) ಜನರೊಡನೆ ಪ್ರಶ್ನಿಸಿದರು, "ಅಲ್ಲಾಹನು ನನ್ನ ಕುರಿತು ನಿಮ್ಮೊಡನೆ ವಿಚಾರಿಸಿದರೆ ನೀವೇನು ಹೇಳುವಿರಿ?" ಆಗ ಅನುಯಾಯಿಗಳು ಏಕ ಧ್ವನಿಯಲ್ಲಿ ಹೀಗೆಂದರು, "ನೀವು ಇಸ್ಲಾಮ್ ಧರ್ಮವನ್ನು ನಮಗೆ ತಲುಪಿಸಿದ್ದೀರೆಂದು ಹೇಳುವೆವು." ಆಗ ಪ್ರವಾದಿವರ್ಯರು(ಸ) ಆಕಾಶದತ್ತ ಕೈಯೆತ್ತಿ ಹೇಳಿದರು, "ಅಲ್ಲಾಹನೇ, ನೀನು ಸಾಕ್ಷಿ." ಆ ವೇಳೆ ಕುರ್‌ಆನಿನ ಈ ವಾಕ್ಯಗಳು ಅವತೀರ್ಣಗೊಂಡುವು.

"ಇಂದು ನಾನು ನಿಮ್ಮ ಧರ್ಮವನ್ನು ನಿಮಗಾಗಿ ಪೂರ್ಣಗೊಳಿಸಿದ್ದೇನೆ. ನನ್ನ ಅನುಗ್ರಹವನ್ನು ನಿಮಗೆ ಪೂರ್ಣಗೊಳಿಸಿರುತ್ತೇನೆ. ಇಸ್ಲಾಮನ್ನು ನಿಮ್ಮ ಧರ್ಮ(ಜೀವನ ಪದ್ಧತಿ)ವಾಗಿ ಸಂತೃಪ್ತನಾಗಿದ್ದೇನೆ." **(ಪವಿತ್ರ ಕುರ್‌ಆನ್: 5: 3)**

ಪ್ರಶ್ನೆಗಳು:

1. ಪ್ರವಾದಿವರ್ಯ(ಸ)ರ ಹಜ್ಜ್ ಕರ್ಮವನ್ನು 'ಹಜ್ಜತ್ತುಲ್ ವಿದಾಅ್' ಎಂದು ಕರೆಯಲು ಕಾರಣವೇನು?

2. ಹಜ್ಜತ್ತುಲ್ ವಿದಾಅ್‌ನಲ್ಲಿ ಪ್ರವಾದಿವರ್ಯ(ಸ)ರೊಂದಿಗೆ ಎಷ್ಟು ಮಂದಿ ಇದ್ದರು?

3. ಹಜ್ಜತ್ತುಲ್ ವಿದಾಅ್‌ನಲ್ಲಿ ಪ್ರವಾದಿವರ್ಯರು(ಸ) ಮಾಡಿದ ಭಾಷಣದ ಮುಖ್ಯಾಂಶವನ್ನು ತಿಳಿಸಿರಿ.

4. 'ಅಲ್ ಯೌಮ ಅಕ್‌ಮಲ್ತು ಲಕುಮ್ ದೀನಕುಮ್.....' ಎಂಬ ಆಯತ್ ಹೇಳಿ ಅರ್ಥ ತಿಳಿಸಿರಿ.

14. ನಿಧನ

ಪ್ರವಾದಿವರ್ಯರು(ಸ) ವಿದಾಯ ಹಜ್ಜ್ ಮುಗಿಸಿ ಮರಳಿದರು. ಅನಂತರ ಹಿಜರಿ 11ನೇ ವರ್ಷದ ಸಫರ್ ತಿಂಗಳಲ್ಲಿ ಪ್ರವಾದಿವರ್ಯರು(ಸ) ಜ್ವರ ಪೀಡಿತರಾದರು. ಇತರ ಪತ್ನಿಯರ ಒಪ್ಪಿಗೆ ಮೇರೆಗೆ ಆಯಿಶಾರ(ರ) ಮನೆಯಲ್ಲಿ ಅವರು ತಂಗಿದರು.

ಸಂಪೂರ್ಣ ಹಾಸಿಗೆ ಹಿಡಿಯುವ ತನಕ ಅವರು ನಮಾಝಿಗಾಗಿ ಮಸೀದಿಗೆ ಹೋಗುತ್ತಿದ್ದರು. ಮಸೀದಿಗೆ ಹೋಗಲು ಅಸಾಧ್ಯವಾದಾಗ ಅಬೂಬಕರ್ ಸಿದ್ದೀಕ್(ರ)ರನ್ನು ಇಮಾಮ್ ಆಗಿ ನೇಮಿಸಿದರು. ಹೀಗೆ ಕೆಲವು ದಿನ ಅಬೂಬಕರ್ ಸಿದ್ದೀಕ್(ರ)ರ ನೇತೃತ್ವದಲ್ಲಿ ನಮಾಝ್ ನಡೆಯಿತು.

ಪ್ರವಾದಿವರ್ಯರು(ಸ) ಮಸೀದಿಗೆ ಬರಲಾಗದಿರುವುದರಿಂದ ಅನುಯಾಯಿಗಳಿಗೆ ತುಂಬಾ ದುಃಖವಾಯಿತು.

ಹೀಗಿರಲು ಒಂದು ದಿನ ಅವರ ಆರೋಗ್ಯ ಸ್ವಲ್ಪ ಚೇತರಿಸಿಕೊಂಡಾಗ ಅವರು ಸ್ನಾನ ಮಾಡಿ ಮಸೀದಿಗೆ ಬಂದರು. ಆ ವೇಳೆ ಒಂದು ಸಣ್ಣ ಭಾಷಣ ಮಾಡಿದರು. ಇದು ಪ್ರವಾದಿವರ್ಯರ(ಸ) ಕೊನೆಯ ಭಾಷಣವಾಗಿತ್ತು. ಅದರಲ್ಲಿ ಅವರು ಹೀಗೆಂದರು, "ಅಲ್ಲಾಹನು ತನ್ನೋರ್ವ ದಾಸನಿಗೆ ಇಹಲೋಕ ಅಥವಾ ಪರಲೋಕದ ಪ್ರತಿಫಲಗಳ ಪೈಕಿ ಯಾವುದಾದರೂ ಒಂದನ್ನು ಆರಿಸುವ ಸ್ವಾತಂತ್ರ್ಯ ನೀಡಿದನು. ಆ ದಾಸನು ಪರಲೋಕದಲ್ಲಿ ಅಲ್ಲಾಹನಿಂದ ದೊರೆಯುವ ಪ್ರತಿಫಲವನ್ನು ಆಯ್ಕೆ ಮಾಡಿದನು."

ಪ್ರವಾದಿವರ್ಯ(ಸ) ನಿಧನ ಸಮೀಪಿಸಿದೆಯೆಂಬುದೇ ಅದರ ಇಂಗಿತವಾಗಿತ್ತು. ಅದನ್ನು ಅರ್ಥ ಮಾಡಿಕೊಂಡ ಅಬೂಬಕರ್(ರ)ರು ಅತ್ತು ಬಿಟ್ಟರು. ಆಗ ಪ್ರವಾದಿವರ್ಯ(ಸ)ರು ಹೇಳಿದರು, "ನಾನು ನನ್ನ ಸಮುದಾಯದಿಂದ ಯಾರನ್ನಾದರೂ ಮಿತ್ರನನ್ನಾಗಿ ಮಾಡಿಕೊಳ್ಳುತ್ತಿದ್ದರೆ ಅಬೂಬಕರ್(ರ)ರನ್ನೇ ಮಿತ್ರರಾಗಿ ಮಾಡಿಕೊಳ್ಳುತ್ತಿದ್ದೆ.

ಆದರೆ ಮಿತ್ರತ್ವಕ್ಕೆ ಇಸ್ಲಾಮಿನ ಸಂಬಂಧವೇ ಧಾರಾಳವಾಗಿದೆ."

ಪ್ರವಾದಿ(ಸ) ಮುಂದುವರಿಸಿದರು, "ಕೇಳಿರಿ! ಹಿಂದಿನ ಸಮುದಾಯಗಳು ತಮ್ಮ ಪ್ರವಾದಿಗಳ ಸಮಾಧಿ ಸ್ಥಳಗಳನ್ನು ಆರಾಧನಾ ಸ್ಥಳಗಳಾಗಿ ಮಾಡಿದುದರಿಂದ ಅಲ್ಲಾಹನ ಶಾಪಕ್ಕೆ ಗುರಿಯಾದುವು. ನನ್ನ ಗೋರಿಯನ್ನು ಆರಾಧಿಸುವುದನ್ನು ನಾನು ನಿಷೇಧಿಸಿರುತ್ತೇನೆ. ಮುಹಾಜಿರರು ಅನ್ಸಾರ್‌ಗಳೊಡನೆ ಉತ್ತಮ ರೀತಿಯಲ್ಲಿ ವರ್ತಿಸಬೇಕು. ಅನ್ಸಾರ್‌ಗಳು ಇಸ್ಲಾಮಿಗೂ ಪ್ರವಾದಿಗೂ(ಸ) ಮತ್ತು ಮುಹಾಜಿರರಿಗೂ ತುಂಬಾ ನೆರವು ನೀಡಿದ್ದಾರೆ."

ರೋಗ ಉಲ್ಬಣಗೊಂಡಿತು. ಹಿಜರಿ 11ನೇ ವರ್ಷದ ರಬೀಉಲ್ ಅವ್ವಲ್ 12ನೇ ತಾರೀಕು ಸೋಮವಾರ ಪ್ರವಾದಿವರ್ಯರು(ಸ) ಪರಲೋಕ ಸೇರಿದರು. ನಿಧನ ವೇಳೆ ಪ್ರವಾದಿವರ್ಯರಿಗೆ(ಸ) 63 ವರ್ಷ ವಯಸ್ಸಾಗಿತ್ತು.

ಅನುಯಾಯಿಗಳು ಪ್ರವಾದಿವರ್ಯರನ್ನು(ಸ) ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದರು ಪ್ರವಾದಿವರ್ಯರು(ಸ) ನಿಧನರಾದ ಸುದ್ದಿ ಕೇಳಿ ಅವರ ಹೃದಯ ತಲ್ಲಣಿಸಿತು. ದೃಢಮನಸ್ಕರಾಗಿದ್ದ ಉಮರ್(ರ) ಕೂಡಾ ವಿಷಣ್ಣರಾದರು. ಪ್ರವಾದಿವರ್ಯರ(ಸ) ನಿಧನವಾರ್ತೆ ತಿಳಿಸಿದವರೊಡನೆ ರೇಗಾಡಿದರು. ಏಕೆಂದರೆ ಪ್ರವಾದಿವರ್ಯರು(ಸ) ನಿಧನರಾದರೆಂಬುದನ್ನು ಅವರಿಗೆ ಸಹಿಸಲಾಗಲಿಲ್ಲ. ಪ್ರವಾದಿವರ್ಯರು(ಸ) ನಿಧನ ರಾದರೆಂದು ಅಬೂಬಕರ್(ರ)ರು ಸಾರಿದ ಬಳಿಕವಷ್ಟೇ ಅವರು ಶಾಂತರಾದರು.

ಮುಸ್ಲಿಮ್ ಸಮುದಾಯಕ್ಕೆ ಯಾವಾಗಲೂ ಸಂಘಟನೆ ಮತ್ತು ನಾಯಕತ್ವ ಇರಬೇಕು. ಪ್ರವಾದಿವರ್ಯರು(ಸ) ನಿಧನರಾದ ಬಳಿಕ ಸಮುದಾಯದ ನಾಯಕತ್ವ ವಹಿಸುವ 'ಖಲೀಫ'ರ ಆಯ್ಕೆಗೆ ಅನುಯಾಯಿಗಳು ಆದ್ಯತೆ ನೀಡಿದರು. ಅವರು ಮಂಗಳವಾರ ಅಬೂಬಕರ್(ರ)ರನ್ನು ಖಲೀಫರಾಗಿ ಆಯ್ಕೆ ಮಾಡಿದರು. ಆ ಬಳಿಕ ಅಲೀ(ರ) ಮತ್ತಿತರರು ಪ್ರವಾದಿವರ್ಯರಿಗೆ(ಸ) ಸ್ನಾನ ಮಾಡಿಸಿ ಮೂರು ವಸ್ತ್ರ ಗಳಿಂದ ಕಫನ್ ಮಾಡಿದರು. ಅನಂತರ ಎಲ್ಲರೂ ನಮಾಝ್ ಮಾಡಿದ ಬಳಿಕ ಬುಧವಾರ ದಫನ ಮಾಡಿದರು. ಆಯಿಶಾ(ರ)ರ ಕೋಣೆಯಲ್ಲಿ ನಿಧನರಾದ ಸ್ಥಳದಲ್ಲಿ ಪ್ರವಾದಿವರ್ಯರನ್ನು(ಸ) ಸಮಾಧಿ ಮಾಡಲಾಯಿತು.

ಪ್ರವಾದಿವರ್ಯರು(ಸ) ಪರಲೋಕ ಸೇರಿದರೂ ಅವರು ಪ್ರಚಾರಗೊಳಿಸಿದ ಇಸ್ಲಾಮ್ ಧರ್ಮವು ಇಂದಿಗೂ ನಮ್ಮ ಬಳಿಯಿದೆ. ನಮ್ಮ ಹೃದಯಗಳಲ್ಲಿ ಪ್ರವಾದಿ ವರ್ಯ(ಸ)ರೊಂದಿಗೆ ಅತ್ಯಧಿಕ ಪ್ರೀತಿ–ಆದರಗಳಿದ್ದರೆ ಮಾತ್ರ ನಾವು ನೈಜ ಮುಸ್ಲಿಮ ರಾಗುತ್ತೇವೆ. ಅಲ್ಲಾಹನ ಅನುಗ್ರಹ ಮತ್ತು ರಕ್ಷಣೆ ಪ್ರವಾದಿವರ್ಯರ(ಸ) ಮೇಲೆ ಸದಾ ಇರಲಿ!

ಪ್ರಶ್ನೆಗಳು:

1. ಪ್ರವಾದಿವರ್ಯರು(ಸ) ಜ್ವರ ಪೀಡಿತರಾದುದು ಯಾವ ವರ್ಷದಲ್ಲಿ? ಯಾವ ತಿಂಗಳಲ್ಲಿ?

2. ಪ್ರವಾದಿವರ್ಯರು(ಸ) ಕೊನೆಯ ಭಾಷಣದಲ್ಲಿ ಹೇಳಿದ ವಿಷಯಗಳನ್ನು ತಿಳಿಸಿರಿ.

3. ಪ್ರವಾದಿವರ್ಯರು(ಸ) ನಿಧನರಾದುದು ಯಾವ ತಿಂಗಳಲ್ಲಿ? ಯಾವ ದಿನದಲ್ಲಿ? ಎಷ್ಟು ವಯಸ್ಸಿನಲ್ಲಿ?

4. ಪ್ರವಾದಿವರ್ಯರು(ಸ) ನಿಧನರಾದರೆಂದು ತಿಳಿಸಿದವರೊಡನೆ ಉಮರ್(ರ) ರೇಗಾಡಲು ಕಾರಣವೇನು?

5. ಪ್ರವಾದಿವರ್ಯರ(ಸ) ನಿಧನದ ಬಳಿಕ ಮುಸ್ಲಿಮ್ ಸಮುದಾಯದ ನಾಯಕ ಮತ್ತು ಇಸ್ಲಾಮೀ ರಾಷ್ಟ್ರದ ಮುಖಂಡರಾಗಿ ಸಹಾಬಿಗಳು ಯಾರನ್ನು ಆಯ್ಕೆ ಮಾಡಿದರು? ಆ ಕಾರ್ಯವನ್ನು ಅವರು ಬೇಗನೆ ಮುಗಿಸಲು ಕಾರಣವೇನು?

6. ಪ್ರವಾದಿವರ್ಯರನ್ನು(ಸ) ಎಲ್ಲಿ ದಫನ ಮಾಡಲಾಯಿತು? ಯಾವ ದಿನದಲ್ಲಿ?

15. ಪ್ರವಾದಿವರ್ಯರ(ಸ) ಮನೆ

ಪ್ರವಾದಿವರ್ಯ(ಸ)ರಿಗೆ ಏಳು ಮಕ್ಕಳಿದ್ದರು. ಆ ಪೈಕಿ 6 ಮಂದಿ ಖದೀಜಾ(ರ)ರಿಗೆ ಹುಟ್ಟಿದ್ದರು. ಇಬ್ರಾಹೀಮ್ ಎಂಬ ಪುತ್ರ ಮಾರಿಯತು ಖಿಬ್ತಿಯಾ(ರ)ರಿಂದ ಜನಿಸಿದ್ದರು. ಪ್ರವಾದಿವರ್ಯ(ಸ)ರ 50ನೇ ವಯಸ್ಸಿನಲ್ಲಿ ಖದೀಜಾ(ರ)ರವರು ನಿಧನರಾಗುವ ತನಕ ಅವರು ಬೇರೆ ವಿವಾಹವಾಗಿರಲಿಲ್ಲ.

ಆದರೆ ಖದೀಜಾ(ರ)ರ ನಿಧನದ ಬಳಿಕ ವಿವಿಧ ಕಾರಣಗಳಿಂದಾಗಿ ಅವರು(ಸ) ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಸ್ವೀಕರಿಸಬೇಕಾಯಿತು.

ಹೀಗೆ ಪ್ರವಾದಿವರ್ಯರು(ಸ) ನಿಧನರಾಗುವಾಗ ಅವರಿಗೆ 9 ಮಂದಿ ಪತ್ನಿಯರಿದ್ದರು. ಅವರಲ್ಲಿ ಕೆಲವರ ಹೊಣೆಯನ್ನು ಪ್ರವಾದಿವರ್ಯರು(ಸ) ಅನಿವಾರ್ಯವಾಗಿ ವಹಿಸಬೇಕಾಯಿತು. ಇತರ ಕೆಲವರೊಂದಿಗಿನ ವಿವಾಹ ಸಂಬಂಧದಿಂದ ಅವರ ಗೋತ್ರಗಳಿಗೆ ಇಸ್ಲಾಮಿನೊಂದಿಗೆ ಪ್ರೀತಿ ಬೆಳೆಯಿತು.

ಪ್ರವಾದಿ ಪತ್ನಿಯರ ಜೀವನವು ಬಹಳ ಪಾವನವಾಗಿತ್ತು. ಪ್ರವಾದಿವರ್ಯರ(ಸ) ಪತ್ನಿಯರಿಗೆ 'ಉಮ್ಮುಹಾತುಲ್ ಮೂಮಿನೀನ್' (ಸತ್ಯವಿಶ್ವಾಸಿಗಳ ಮಾತೆಯರು) ಎಂಬ ಸ್ಥಾನವಿದೆ. ಪ್ರವಾದಿವರ್ಯರ(ಸ) ಬಳಿಕ ಅವರನ್ನು ಬೇರಾರಿಗೂ ವಿವಾಹ ಮಾಡಿ ಕೊಡಬಾರದೆಂದು ಅಲ್ಲಾಹನು ಕುರ್‌ಆನಿನಲ್ಲಿ ತಿಳಿಸಿದನು.

ಪ್ರವಾದಿವರ್ಯರ(ಸ) ನಾಲ್ವರು ಪುತ್ರಿಯರಲ್ಲಿ ಓರ್ವರಾದ ಝೈನಬ್‌ರನ್ನು ಅಬುಲ್ ಆಸ್ ವಿವಾಹವಾದರು.

ರುಕಿಯಾರನ್ನು ಉಸ್ಮಾನ್ ಬಿನ್ ಅಫ್ಫಾನ್(ರ) ವಿವಾಹವಾದರು. ರುಕಿಯಾ ನಿಧನರಾದ ಬಳಿಕ ಉಮ್ಮುಕುಲ್ಸುಮ್‌ರನ್ನು ಉಸ್ಮಾನ್(ರ)ರಿಗೆ ವಿವಾಹ ಮಾಡಿಸಿ ಕೊಟ್ಟರು. ಫಾತಿಮಾರನ್ನು ಅಲೀ(ರ) ವಿವಾಹವಾದರು.

ಆ ಪೈಕಿ ಫಾತಿಮರಲ್ಲಿ ಮಾತ್ರ ಸಂತಾನ ಪರಂಪರೆ ಉಳಿಯಿತು. ಫಾತಿಮರಿಗೆ ಹಸನ್, ಹುಸೈನ್, ಝೈನಬ್, ಉಮ್ಮು ಕುಲ್ಸೂಮ್ ಎಂಬ ನಾಲ್ವರು ಮಕ್ಕಳಿದ್ದರು.

ಪ್ರಶ್ನೆಗಳು:

1. ನಿಧನದ ವೇಳೆ ಪ್ರವಾದಿವರ್ಯ(ಸ)ರಿಗೆ ಎಷ್ಟು ಪತ್ನಿಯರಿದ್ದರು?

2. ಪ್ರವಾದಿವರ್ಯ(ಸ)ರ ಪತ್ನಿಯರ ಸ್ಥಾನವೇನು? 'ಉಮ್ಮುಹಾತುಲ್ ಮೂಮಿನೀನ್' ಎಂಬುದರ ಅರ್ಥವೇನು?

3. ಪ್ರವಾದಿವರ್ಯರ(ಸ) ಮಕ್ಕಳಲ್ಲಿ ಯಾರ ಸಂತಾನ ಪರಂಪರೆ ಉಳಿಯಿತು?

4. ಫಾತಿಮಾರಿಗೆ ಅಲೀ(ರ)ಯವರಿಂದ ಎಷ್ಟು ಮಕ್ಕಳು ಹುಟ್ಟಿದರು? ಅವರ ಹೆಸರೇನು?

16. ವಿಜಯ

ಇಸ್ಲಾಮ್ ಧರ್ಮವು ಲೋಕಾಂತ್ಯದ ವರೆಗಿನ ಜನರ ಪರಲೋಕ ಮೋಕ್ಷದ ಮಾರ್ಗವಾಗಿದೆ. ವಿಶ್ವಾಸ ಕಾರ್ಯಗಳು, ಆಚಾರ ಕ್ರಮಗಳು, ಸಾಮೂಹಿಕ ಜೀವನದ ಶಿಷ್ಟಾಚಾರಗಳು, ಆಡಳಿತ ವಿಧಿ ಇತ್ಯಾದಿ ಎಲ್ಲ ಅಂಶಗಳನ್ನು ಅದು ಒಳಗೊಂಡಿದೆ. ಜಗತ್ತಿನಲ್ಲಿ ಅದಕ್ಕಿಂತ ಉತ್ತಮ ಜೀವನ ಕ್ರಮ ಬೇರೊಂದಿಲ್ಲ. ಅದು ಅಲ್ಲಾಹನು ಮಾನವ ಲೋಕಕ್ಕೆ ನೀಡಿರುವ ಜೀವನ ಪದ್ಧತಿಯಾಗಿದೆ.

ಪ್ರವಾದಿವರ್ಯರು(ಸ) ಆ ಜೀವನ ಪದ್ಧತಿಯನ್ನು ಸಂಪೂರ್ಣವಾಗಿ ಸಂಸ್ಥಾಪಿಸಿದರು.

ಅನುಯಾಯಿಗಳು ಪ್ರವಾದಿವರ್ಯರ(ಸ) ನಾಯಕತ್ವದಲ್ಲಿ ಸಂಘಟಿತರಾಗಿ ಬಾಳಿದ್ದರು. ಪ್ರವಾದಿವರ್ಯರು(ಸ) ಅವರ ನಾಯಕರೂ ಆಡಳಿತಗಾರರೂ ಆಗಿದ್ದರು. ಇಸ್ಲಾಮಿನ ಆಡಳಿತ ವ್ಯವಸ್ಥೆಯನ್ನು ಹಿಜ್ರತ್‌ನ ಬಳಿಕ ಮದೀನಾದಲ್ಲಿ ಪ್ರಥಮವಾಗಿ ಜಾರಿಗೊಳಿಸಲಾಯಿತು.

ಅನಂತರ ಹತ್ತು ವರ್ಷದೊಳಗೆ ಅರೇಬಿಯದಾದ್ಯಂತ ಇಸ್ಲಾಮಿಗೆ ಅಧಿಕಾರ ಮತ್ತು ಸ್ವಾತಂತ್ರ್ಯ ಲಭಿಸಿತು. ದಕ್ಷಿಣದಿಂದ ಉತ್ತರಕ್ಕೆ 1,800 ಮೈಲು ಮತ್ತು ಪೂರ್ವದಿಂದ ಪಶ್ಚಿಮಕ್ಕೆ 1,200 ಮೈಲು ವಿಸ್ತಾರವಾಗಿದ್ದ ಆ ರಾಷ್ಟ್ರದಲ್ಲಿ ಇಸ್ಲಾಮಿನ ಹೊಸ ವ್ಯವಸ್ಥೆಯನ್ನು ಬಹಳ ಅಲ್ಪಾವಧಿಯಲ್ಲಿ ಸ್ಥಾಪಿಸಿರುವುದು ಒಂದು ಮಹಾ ಸಾಧನೆಯಾಗಿದೆ.

ಅರಬರು ಅಜ್ಞಾನ ಮತ್ತು ದುರಾಚಾರಗಳಲ್ಲಿ ಮುಳುಗಿದ್ದರು. ಅಂತಹ ಶೋಚನೀಯ ಪರಿಸ್ಥಿತಿಯಲ್ಲಿ ಪ್ರವಾದಿ(ಸ) ಒಂಟಿಯಾಗಿ ಇಸ್ಲಾಮಿನ ಪ್ರಚಾರ ಆರಂಭಿಸಿದರು.

ಅನಂತರ 23 ವರ್ಷಗಳಲ್ಲಿ ಅರಬರಲ್ಲಿದ್ದಂತಹ ಎಲ್ಲ ಕೆಟ್ಟ ಸಂಪ್ರದಾಯಗಳನ್ನು ಅಳಿಸಿ ಹಾಕಿದರು. ಒಂದು ಪವಿತ್ರ ಜೀವನ ವ್ಯವಸ್ಥೆಗೆ ಅಧಿಕಾರ ದೊರಕಿಸಿಕೊಟ್ಟರು.

ಈ ವಿಜಯವು ಇತಿಹಾಸದಲ್ಲಿ ಅದ್ವಿತೀಯವಾಗಿದೆ. ಇಸ್ಲಾಮಿನ ಮೇಲ್ಮೆ ಮತ್ತು ಪ್ರವಾದಿವರ್ಯರ(ಸ) ಸದ್ಗುಣ ಸಂಪನ್ನತೆಯೇ ಈ ವಿಜಯದ ಪ್ರಧಾನ ಉಪಾಧಿಯಾಗಿದೆ.

ಪ್ರಶ್ನೆಗಳು:

1. ಇಸ್ಲಾಮೀ ಆಡಳಿತ ವ್ಯವಸ್ಥೆ ಪ್ರಥಮವಾಗಿ ಎಲ್ಲಿ ಜಾರಿಯಾಯಿತು?
2. ಅರೇಬಿಯಾದ ವಿಸ್ತಾರವೆಷ್ಟು?
3. ಕೆಲವಾರು ವರ್ಷಗಳಲ್ಲಿ ಇಸ್ಲಾಮನ್ನು ಸಂಪೂರ್ಣವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರವಾದಿವರ್ಯರು(ಸ) ಯಶಸ್ವಿಯಾಗಲು ಕಾರಣವೇನು?

17. ಗುಣ ನಡತೆ

"ನಿಶ್ಚಯವಾಗಿಯೂ ನೀವು ಉನ್ನತ ಗುಣ ಸ್ವಭಾವದವರಾಗಿರುವಿರಿ" ಎಂದು ಪವಿತ್ರ ಕುರ್‌ಆನಿನಲ್ಲಿ ಪ್ರವಾದಿವರ್ಯರನ್ನು(ಸ) ವರ್ಣಿಸಲಾಗಿದೆ. ಪ್ರವಾದಿವರ್ಯರ(ಸ) ರೂಪ ಮತ್ತು ಸ್ವಭಾವವು ಎಲ್ಲರನ್ನೂ ಆಕರ್ಷಿಸುವಂತಿತ್ತು. ಪ್ರವಾದಿವರ್ಯರು(ಸ) ನಿಷ್ಕಳಂಕ ಮತ್ತು ಸತ್ಯವಂತನೆಂದು ಅವರನ್ನು ಭೇಟಿಯಾಗುವವರಿಗೆ ಭಾಸವಾಗುತ್ತಿತ್ತು. ಅವರ ವರ್ತನೆ ಮತ್ತು ಮುಖಭಾವವು ಅಷ್ಟೊಂದು ಪಾವನವಾಗಿತ್ತು.

ಪ್ರವಾದಿವರ್ಯರು(ಸ) ನಸುನಗುತ್ತಾ ಮಾತಾಡುತ್ತಿದ್ದರು. ಯಾರನ್ನೂ ನಿಂದಿಸಿ ಗೇಲಿ ಮಾಡುತ್ತಿರಲಿಲ್ಲ. ತನ್ನ ಆಶ್ರಯದಲ್ಲಿರುವವರೊಡನೆ ಪ್ರೀತಿ ಮತ್ತು ಸಮಭಾವದಿಂದ ವರ್ತಿಸುತ್ತಿದ್ದರು. ಸೇವಕರೊಡನೆಯೂ ಮನನೋಯಿಸುವ ಮಾತುಗಳನ್ನು ಹೇಳುತ್ತಿರಲಿಲ್ಲ.

ಹಿರಿಯರನ್ನು ಗೌರವಿಸಬೇಕು, ಕಿರಿಯರೊಡನೆ ವಾತ್ಸಲ್ಯ ತೋರಬೇಕೆಂದು ಅವರು(ಸ) ಬೋಧಿಸುತ್ತಿದ್ದರು.

ಪ್ರವಾದಿವರ್ಯರಿಗೆ(ಸ) ಆಡಂಬರ ಅಥವಾ ಅಹಂಕಾರವಿರಲಿಲ್ಲ. ಅವರು ಮಕ್ಕಳಿಗೂ ಸಲಾಮ್ ಹೇಳುತ್ತಿದ್ದರು. ಮಕ್ಕಳೆಂದರೆ ಪ್ರವಾದಿವರ್ಯರಿಗೆ(ಸ) ಬಹಳ ಪ್ರೀತಿ.

ಪ್ರವಾದಿವರ್ಯರು(ಸ) ಬಹಳ ಕರುಣಾಳುವಾಗಿದ್ದರು. ಮೃಗಗಳೊಂದಿಗೂ ಅವರು ಕನಿಕರ ಮತ್ತು ಕರುಣೆ ತೋರಿಸುತ್ತಿದ್ದರು. ಪ್ರವಾದಿವರ್ಯರಲ್ಲಿ(ಸ) ಲಜ್ಜೆಯ ಸ್ವಭಾವವು ಗಮನಾರ್ಹವಾಗಿತ್ತು. ಅವರ ಬಾಯಿಯಿಂದ ಕೆಟ್ಟ ಮಾತುಗಳು ಹೊರಡುತ್ತಿರಲಿಲ್ಲ.

ಪರೋಪಕಾರವು ಅವರಿಗೆ ತೃಪ್ತಿ ಮತ್ತು ಸಂತೋಷದ ವಿಷಯವಾಗಿತ್ತು. ಅವರು ಇತರರಿಂದ ಯಾವ ಸೇವೆಯನ್ನೂ ಉಪಕಾರವನ್ನೂ ಬಯಸುತ್ತಿರಲಿಲ್ಲ. ಇತರರ ಕೆಲಸಗಳನ್ನು ಅವರು ಮಾಡಿಕೊಡುತ್ತಿದ್ದರು. ರೋಗಿಗಳನ್ನು ಭೇಟಿಯಾಗಿ

ಅವರಿಗಾಗಿ ಪ್ರಾರ್ಥಿಸುತ್ತಿದ್ದರು. ಕುಟುಂಬ ಸಂಬಂಧಗಳನ್ನು ಬೆಳೆಸಿ ನೆರೆಕರೆಯವರೊಡನೆ ಪ್ರೀತಿಯಿಂದ ವರ್ತಿಸುತ್ತಿದ್ದರು. ಅತಿಥಿಗಳನ್ನು ಸತ್ಕರಿಸುತ್ತಿದ್ದರು. ಆಮಂತ್ರಣ ಸ್ವೀಕರಿಸುತ್ತಿದ್ದರು. ವೈರಿ ಮತ್ತು ಮಿತ್ರ ಭೇದವಿಲ್ಲದೆ ಎಲ್ಲರಿಗೂ ಹಿತವಾಗಲೆಂಬುದೇ ಅವರ ಆಗ್ರಹವಾಗಿತ್ತು. ಪ್ರವಾದಿವರ್ಯರನ್ನು(ಸ) ಕೊಲೆ ಮಾಡುವ ಸಂಚು ನಡೆಸಿದವರಿಗೂ ಅವರು ಕ್ಷಮೆ ನೀಡಿದ್ದರು. ಪ್ರವಾದಿವರ್ಯರಿಗೆ(ಸ) ನನ್ನ ಮೇಲೆ ಹೆಚ್ಚು ಪ್ರೀತಿಯಿದೆಯೆಂದು ಪ್ರತಿಯೊಬ್ಬ ಅನುಯಾಯಿಗೂ ಭಾಸವಾಗುವ ರೀತಿಯಲ್ಲಿ ಪ್ರವಾದಿವರ್ಯರು(ಸ) ಅವರೆಲ್ಲರೊಡನೆಯೂ ಪ್ರೀತಿಯಿಂದ ವ್ಯವಹರಿಸುತ್ತಿದ್ದರು.

ಪ್ರವಾದಿವರ್ಯರು(ಸ) ಬಹಳ ಧೈರ್ಯಶಾಲಿಯಾಗಿದ್ದರು. ಹೇಡಿತನವನ್ನು ದ್ವೇಷಿಸಿ ಧೀರತೆಯನ್ನು ಹೊಗಳುತ್ತಿದ್ದರು. ಧೈರ್ಯದಲ್ಲಿ ಪ್ರವಾದಿವರ್ಯರನ್ನು(ಸ) ಮೀರಿಸುವವರು ಯಾರೂ ಇರಲಿಲ್ಲ. ಪ್ರವಾದಿವರ್ಯರ(ಸ) ಉದಾರತೆಯೂ ಬಹಳ ಪ್ರಸಿದ್ಧವಾಗಿದೆ. ಸ್ವಂತ ಬೇಡಿಕೆಗಳನ್ನು ನಿರ್ಲಕ್ಷಿಸಿ ಅನ್ಯರ ಬೇಡಿಕೆಗಳನ್ನು ಪೂರೈಸುವುದು ಅವರ ರೂಢಿಯಾಗಿತ್ತು.

ಡಂಭಾಚಾರ ಮತ್ತು ದುಂದುವೆಚ್ಚವನ್ನು ಅವರು ವಿರೋಧಿಸುತ್ತಿದ್ದರು. ಪ್ರವಾದಿವರ್ಯರ(ಸ) ಆಹಾರ, ಬಟ್ಟೆಬರೆ ಇತ್ಯಾದಿ ಬಹಳ ಸರಳವಾಗಿತ್ತು. ಹಾಗಿದ್ದರೂ ಆರೋಗ್ಯ ಮತ್ತು ಆತ್ಮಭಾವವನ್ನು ಕಾಯ್ದುಕೊಂಡಿದ್ದರು. ಪ್ರವಾದಿ ವರ್ಯರ(ಸ) ದೇಹ ಮತ್ತು ಉಡುಪು ಸದಾ ಶುಭ್ರವಾಗಿರುತ್ತಿತ್ತು. ಅವರು ಸುಗಂಧ ದ್ರವ್ಯಗಳನ್ನು ಪೂಸುತ್ತಿದ್ದರು. ತಲೆಗೆ ಎಣ್ಣೆ ಹಾಕಿ ಕೂದಲು ಬಾಚುತ್ತಿದ್ದರು.

ಪ್ರವಾದಿವರ್ಯರು(ಸ) ಸದಾ ಅಲ್ಲಾಹನನ್ನು ಸ್ಮರಿಸುತ್ತಿದ್ದರು. ಪ್ರಪಂಚವನ್ನು ನೋಡಿ ಅಲ್ಲಾಹನ ಶಕ್ತಿಯುಕ್ತಿಯ ಬಗ್ಗೆ ಆಲೋಚಿಸುತ್ತಿದ್ದರು. ನಮಾಝ್‌ನ ಬಗ್ಗೆ ಬಹಳ ಸಂತೋಷ ಮತ್ತು ಆಸಕ್ತಿ ಹೊಂದಿದ್ದರು. ಏನಾದರೂ ಕಷ್ಟ ಬಂದರೆ ಕೂಡಲೇ ನಮಾಝ್ ಮಾಡುತ್ತಿದ್ದರು. ರಾತ್ರಿ ವೇಳೆಯಲ್ಲಿಯೂ ಬಹಳ ಹೊತ್ತು ನಮಾಝ್ ಮಾಡುತ್ತಿದ್ದರು. ಆಗಾಗ್ಗೆ ಉಪವಾಸ ಆಚರಿಸುತ್ತಿದ್ದರು.

ಅವರ ಗುಣ ನಡತೆಯನ್ನು ಎಷ್ಟು ವಿವರಿಸಿದರೂ ಸಾಲದು. ಅವರ ಮಾದರಿಯಲ್ಲಿ ಬಾಳುವ ಅನುಗ್ರಹವನ್ನು ಅಲ್ಲಾಹನು ನಮಗೆ ದಯಪಾಲಿಸಲಿ.

ಪ್ರಶ್ನೆಗಳು:

1. ಪ್ರವಾದಿವರ್ಯರು(ಸ) ಮಕ್ಕಳೊಂದಿಗೆ ಹೇಗೆ ವರ್ತಿಸುತ್ತಿದ್ದರು?
2. ಪ್ರವಾದಿವರ್ಯರ(ಸ) ಗುಣ ನಡತೆಗಳನ್ನು ವಿವರಿಸಿರಿ?
3. ಪ್ರವಾದಿವರ್ಯರ(ಸ) ಬಗ್ಗೆ ಅವರ ಸಂಗಾತಿಗಳಿಗೆ ಹೇಗೆನಿಸುತ್ತಿತ್ತು?